# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶನಿವಾರ, ಅಕ್ಟೋಬರ್ 05, 2024

ಸಂಪುಟ : 51 ಸಂಚಿಕೆ : 143 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


### ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಸಿಇಟಿ-ನೀಟ್ ಪ್ರವೇಶ ತರಬೇತಿಗೆ ಚಾಲನೆ

# ಖಾಸಗಿ ಸಹಭಾಗಿತ್ವದಲ್ಲಿ ವಿನೂತನ ಯೋಜನೆ



ದಾವಣಗೆರೆ, ಅ. 4 – ಖಾಸಗಿ ಸಹಭಾಗಿತ್ವದಲ್ಲಿ ಸರ್ಕಾರಿ ಕಾಲೇಜು ಮಕ್ಕಳಿಗೆ ಕೆಸಿಇಟಿ ಹಾಗೂ ನೀಟ್ ಪ್ರವೇಶಕ್ಕೆ ತರಬೇತಿ ನೀಡುವ ವಿನೂತನವಾದ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಆರಂಭಿಸಲಾಗಿದೆ ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯ್ತಿ, ಸಾರ್ವಜನಿಕ ಶಿಕ್ಷಣ ಇಲಾಖೆ (ಪಿ.ಯು.) ಹಾಗೂ ಖಾಸಗಿ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 'ಸಕ್ಷಮ' ಸಿಇಟಿ ಮತ್ತು ನೀಟ್ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇದುವರೆಗೂ ಸರ್ಕಾರಿ ಶಾಲಾ ಮಕ್ಕಳನ್ನು ಮಂಡಳಿ ಪರೀಕ್ಷೆಗೆ ಮಾತ್ರ ಸಜ್ಜುಗೊಳಿಸಲಾಗುತ್ತಿತ್ತು. ಈಗ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ನೀಡಲು ನಿರ್ಧರಿಸಲಾಗಿದೆ. ಆನ್‌ಲೈನ್ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡುವಲ್ಲಿ ಖಾಸಗಿ ಶಾಲೆಗಳೂ ಕೈ ಜೋಡಿಸಿವೆ. ಎ.ಎಂ.ಡಿ. (4ನೇ ಪುಟಕ್ಕೆ)

# ರಾಜ್ಯ ರಾಜಕಾರಣಕ್ಕೆ ಬನ್ನಿ

## ಸಿಎಂ ಆಗಲು ಖರ್ಗೆಗೆ ಸತೀಶ್ ಜಾರಕಿಹೊಳಿ ಮನವಿ



ಬೆಂಗಳೂರು, ಅ. 4 -ರಾಷ್ಟ್ರ ರಾಜಕಾರಣದಿಂದ ರಾಜ್ಯಕ್ಕೆ ಹಿಂತಿರುಗಿ ಮುಖ್ಯಮಂತ್ರಿ ಗಾದಿ ಪಡೆಯುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮನವಿ ಮಾಡಿದ್ದಾರೆ.

ಮುಡಾ ಹಗರಣದಲ್ಲಿ ಸಿಲುಕಿರುವ ಸಿದ್ದರಾಮಯ್ಯ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ.) ಯಾವುದೇ ಕ್ಷಣದಲ್ಲಿ ಪ್ರವೇಶಿಸಲಿದ್ದು ಇದರಿಂದ ನಾಯಕತ್ವ ಮತ್ತು ಸರ್ಕಾರ ಇಕ್ಕಟ್ಟಿಗೆ ಸಿಲುಕಲಿದೆ.

ಇಂತಹ ಸನ್ನಿವೇಶದಲ್ಲಿ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯಲು ವರಿಷ್ಠರು ಮುಂದಾಗುತ್ತಾರೆ, ಇಲ್ಲವೇ ಸಿದ್ದರಾಮಯ್ಯ ಅವರೇ ತಮ್ಮ ಸ್ಥಾನ ತ್ಯಜಿಸುವ ಸಾಧ್ಯತೆ ಇದೆ. ಇದರ ಬೆನ್ನಲ್ಲೇ ಪ್ರದೇಶ ಕಾಂಗ್ರೆಸ್‌ನಲ್ಲಿ ನಾಯಕತ್ವಕ್ಕಾಗಿ ಬಣ ರಾಜಕೀಯ ಸಭೆಗಳು ಗೌಪ್ಯವಾಗಿ ಆರಂಭಗೊಂಡಿವೆ.

ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರುಗಳು ಈಗಾಗಲೇ ಸಮಾಜ ಕಲ್ಯಾಣ ಸಚಿವ ಮಹದೇವಪ್ಪ ನಿವಾಸದಲ್ಲಿ ಸಭೆ ನಡೆಸಿ, ಪರ್ಯಾಯ ನಾಯಕತ್ವ ನಮ್ಮ ಸಮುದಾಯದಲ್ಲೇ ಇರಬೇಕೆಂಬ ತೀರ್ಮಾನ ಕೈಗೊಂಡಿದೆ.

ಮತ್ತೊಂದೆಡೆ ವರಿಷ್ಠರು ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಮಾದರಿಯ ನಾಯಕನ ಆಯ್ಕೆಗೆ ಅನ್ವೇಷಣೆ ನಡೆಸಿದೆ. ಮುಖ್ಯಮಂತ್ರಿ ಗಾದಿ ತಮಗೇ (4ನೇ ಪುಟಕ್ಕೆ)

# ಜಾತಿ ಗಣತಿ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ : ಸಿದ್ದರಾಮಯ್ಯ



ಬೆಂಗಳೂರು, ಅ. 4 - ಜಾತಿ ಗಣತಿ ವರದಿ ಸ್ವೀಕರಿಸಿದ್ದು, ಇಲಾಖಾ ಸಚಿವರು ಮತ್ತು ಸಂಪುಟ ಸಭೆಯಲ್ಲಿರಿಸಿ ಚರ್ಚೆ ನಂತರ ಜಾರಿ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ಜಾರಿ ಬಗ್ಗೆ ಶಾಸಕ ಬಸವರಾಜ ರಾಯರೆಡ್ಡಿ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಮುಂದಿನ ವಾರ ಹಿಂದುಳಿದ ವರ್ಗಗಳ ಇಲಾಖಾ ಸಚಿವರ ಜೊತೆ ಚರ್ಚೆ ನಡೆಸಲಾಗುವುದು ಎಂದರು.

ಒಳಮೀಸಲಾತಿ ಜಾರಿ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದೆ, ಈ ಸಂಬಂಧ ಸಚಿವ ಸಂಪುಟದಲ್ಲಿ ಹಾಗೂ ಪಕ್ಷದ ವರಿಷ್ಠರೊಂದಿಗೆ ಚರ್ಚೆ ನಡೆಸಲಾಗುವುದು. ಸಿದ್ದರಾಮಯ್ಯ ಪರ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ (4ನೇ ಪುಟಕ್ಕೆ)

# ತಿಮ್ಮಪ್ಪನ ಪ್ರಸಾದ : ತನಿಖೆಗೆ ಎಸ್.ಐ.ಟಿ. ರಚನೆ



ನವದೆಹಲಿ, ಅ. 4 - ತಿರುಪತಿ ತಿಮ್ಮಪ್ಪನ ಪ್ರಸಾದದ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬು ಬಳಸಲಾಗಿತ್ತು ಎಂಬ ಆರೋಪದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಐವರು ಸದಸ್ಯರ ಸ್ವತಂತ್ರ ವಿಶೇಷ ತನಿಖಾ ತಂಡ (ಎಸ್.ಐ.ಟಿ.) ರಚಿಸಿದೆ.

ಆಂಧ್ರಪ್ರದೇಶ ಸರ್ಕಾರ ಈ ಪ್ರಕರಣದ ತನಿಖೆಗೆ ಈಗಾಗಲೇ ವಿಶೇಷ ತನಿಖಾ ತಂಡ ರಚಿಸಿತ್ತು. ಆ ತಂಡದ ಬದಲು ಸುಪ್ರೀಂ ಕೋರ್ಟ್ ರಚಿಸಿರುವ ವಿಶೇಷ ಸ್ವತಂತ್ರ ತನಿಖಾ ತಂಡ ತನಿಖೆ ನಡೆಸಲಿದೆ.

ತನಿಖಾ ತಂಡದಲ್ಲಿ ಸಿ.ಬಿ.ಐ. ಹಾಗೂ ಆಂಧ್ರ ಪ್ರದೇಶ ಪೊಲೀಸರ ತಲಾ ಇಬ್ಬರು ಅಧಿಕಾರಿಗಳು ಹಾಗೂ ಎಫ್.ಎಸ್.ಎಸ್.ಎ.ಐ.ನ ಹಿರಿಯ ಅಧಿಕಾರಿ ಇರಲಿದ್ದಾರೆ ಎಂದು ಸುಪ್ರೀಂ ಕೋರ್ಟ್ ನ್ಯಾಯ (4ನೇ ಪುಟಕ್ಕೆ)

## ಕಲುಷಿತ ನೀರಿನಿಂದ ಸಾವಿರಕ್ಕೂ ಹೆಚ್ಚು ಜನ ಅಸ್ವಸ್ಥ

ಉಡುಪಿ, ಅ. 4 - ಉಡುಪಿ ಜಿಲ್ಲೆಯ ಉಪ್ಪುಂಡ ಎಂಬಲ್ಲಿನ ಸಾವಿರಕ್ಕೂ ಹೆಚ್ಚು ಜನರು ಕಲುಷಿತ ನೀರು ಸೇವಿಸಿ ಅಸ್ವಸ್ಥರಾಗಿದ್ದಾರೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಾರ್ವಜನಿಕ ನೀರು ಪೂರೈಕೆ ಟ್ಯಾಂಕ್‌ನಲ್ಲಿನ ನೀರು ಮಲಿನಗೊಂಡು ಈ ಅನಾಹುತ ಸಂಭವಿಸಿದೆ. ಅಸ್ವಸ್ಥರಾದ ಯಾರ ಸ್ಥಿತಿಯೂ ಗಂಭೀರವಾಗಿಲ್ಲ. ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದ ನಂತರ ಬಹುತೇಕರು ಚೇತರಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಉಪ್ಪುಂಡ ಗ್ರಾಮ ಪಂಚಾಯಿತಿಯ ಕರ್ಕಿ ಕಳ್ಳಿ ಹಾಗೂ ಮಡಿಕಲ್ ವಾರ್ಡುಗಳಲ್ಲಿನ ಜನರಲ್ಲಿ ವಾಂತಿ ಹಾಗೂ ಬೇಧಿ ಕಾಣಿಸಿಕೊಂಡಿದೆ.

## ಒಳಮೀಸಲಾತಿ ತೀರ್ಪು ಪರಿಶೀಲನೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಅ. 4 - ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಒಳ ಮೀಸಲಾತಿ ಕಲ್ಪಿಸಲು ರಾಜ್ಯಗಳಿಗೆ ಅಧಿಕಾರ ಇದೆ ಎಂದು ನೀಡಲಾಗಿದ್ದ ತೀರ್ಪನ್ನು ಮರುಪರಿಶೀಲಿಸಬೇಕು ಎಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಒಳ ಮೀಸಲಾತಿ ಕಲ್ಪಿಸಲು ರಾಜ್ಯಗಳಿಗೆ ಅಧಿಕಾರ ಇದೆ ಎಂದು ಕಳೆದ ಆಗಸ್ಟ್ 1ರಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿತ್ತು. ಈ ತೀರ್ಪಿನ ಮರು ಪರಿಶೀಲನೆಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಆದರೆ ತೀರ್ಪಿನಲ್ಲಿ ಯಾವುದೇ ಲೋಪ ಇಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

## ಶಾಮನೂರಿನ ಗೌಡ್ರು ಪ್ರಭುದೇವ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ
ರಾಮಾಂಜನೇಯ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಾದ

**ಶ್ರೀ ಎಸ್.ಜಿ. ಗೌಡ್ರು ಪ್ರಭುದೇವ**

ಅವರು ದಿನಾಂಕ 04.10.2024ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 72 ವರ್ಷ ವಯಸ್ಸಾಗಿತ್ತು.
ಪತ್ನಿ, ಮೂವರು ಪುತ್ರರು, ಸಹೋದರರು-ಸಹೋದರಿಯರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.10.2024ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್ ಹೌಸ್ ಹತ್ತಿರವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ ಹಾಗೂ
ಕರೂರು ವಂಶಸ್ಥರು, ಗೌಡ್ರು ವಂಶಸ್ಥರು, ಶಾಮನೂರು.
ಮೊ. 96203-30071, 94484-15188







# ಡಿಜೆ ಸಂಸ್ಕೃತಿ ಕೈ ಬಿಡಲು ಮಠಾಧೀಶರು ಯುವ ಸಮೂಹಕ್ಕೆ ಬುದ್ಧಿ ಮಾತು ಹೇಳಲಿ



**ಹೊನ್ನಾಳಿಯಲ್ಲಿ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದ ಶಾಸಕ ಡಿ.ಜಿ. ಶಾಂತನಗೌಡ**

ಹೊನ್ನಾಳಿ, ಅ.4- ನಾಡಿನ ಮಠಾಧೀಶರುಗಳು ಗಣಪತಿ ಹಬ್ಬದ ಸಂದರ್ಭದಲ್ಲಿ ಡಿಜೆ ಸಂಸ್ಕೃತಿ ಕೈಬಿಡುವಂತೆ ಯುವ ಸಮೂಹಕ್ಕೆ ಬುದ್ಧಿ ಮಾತು ಹೇಳಬೇಕು. ಇದು ಮಠಾಧೀಶರುಗಳಿಂದ ಮಾತ್ರವೇ ಸಾಧ್ಯವಿದ್ದು ರಾಜಕಾರಣಿಗಳಿಂದಲ್ಲವೆಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಪಟ್ಟಣದ ಹಿರೇಕಲ್ಮಠದ ಶ್ರೀ ಜಗದ್ಗುರು ಪಂಚಾಚಾರ್ಯ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಶರನ್ನವರಾತ್ರಿ ಮತ್ತು ದಸರಾ ಮಹೋತ್ಸವದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮಗಳಲ್ಲಿನ ದೇವಸ್ಥಾನದ ಉದ್ಘಾಟನೆ ಮತ್ತಿತರೆ ಧಾರ್ಮಿಕ ಕಾರ್ಯಕ್ರಮಗಳಿಗೆ ಮಠಾಧೀಶರನ್ನು ಆಹ್ವಾನ ಮಾಡುವ ಸಂದರ್ಭದಲ್ಲಿ ಗಣಪತಿ ಮೂರ್ತಿಯ ವಿಸರ್ಜನಾ ಸಂದರ್ಭದಲ್ಲಿ ಡಿಜೆ ಸಂಸ್ಕೃತಿ ಕೈ ಬಿಟ್ಟರೆ ಮಾತ್ರವೇ ಧಾರ್ಮಿಕ ಸಭೆ-ಸಮಾರಂಭಗಳಿಗೆ ಬರುವುದಾಗಿ ತಿಳಿಸಿದರೆ ಈ ಪಾಶ್ಚಿಮಾತ್ಯ ಡಿಜೆ ಸಂಸ್ಕೃತಿ ನಿರ್ಮೂಲನೆ ಮಾಡಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಡಿಜೆ ಬದಲಾಗಿ ಡೊಳ್ಳು, ಭಜನೆ, ಗ್ರಾಮೀಣ ಸೊಗಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವಂತೆ ಭಕ್ತ ಸಮೂಹಕ್ಕೆ ಮಾರ್ಗದರ್ಶನ ನೀಡಬೇಕಾಗಿ ಅವರು ವಿನಂತಿಸಿದರು.

ಗಣಪತಿ ಹಬ್ಬವು ಈ ಹಿಂದೆ ಸ್ವಾತಂತ್ರ್ಯದ ಸಂದರ್ಭದಲ್ಲಿ ಒಗ್ಗಟ್ಟನ್ನು ಪ್ರದರ್ಶಿಸಲು ಹಮ್ಮಿಕೊಳ್ಳಲಾಗಿತ್ತು. ಆದರೆ ಇಂದು ಇದೇ ಹಬ್ಬದ ಸಂದರ್ಭದಲ್ಲಿ ಯುವಕರು ಕುಡಿತ, ಗುಟ್ಕಾ ಮತ್ತಿತರೆ ಮಾದಕ ವ್ಯಸನಗಳನ್ನು ಸೇವಿಸಿ ನೃತ್ಯ ಮಾಡುತ್ತಾ ತಮ್ಮ ಉತ್ತಮ ಭವಿಷ್ಯಕ್ಕೆ ಕಲ್ಲು ಹಾಕಿಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಹಿರೇಕಲ್ಮಠದ ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಶ್ರೀ ಮಠದಲ್ಲಿ ದಸರಾ ಹಬ್ಬದ ಪ್ರಯುಕ್ತ ನಾಡಿನ ಒಳಿತಿಗಾಗಿ ಹೋಮ-ಹವನ,ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಚನ್ನಪ್ಪ ಸ್ವಾಮಿ ವಿದ್ಯಾಪೀಠದ ಕಾರ್ಯದರ್ಶಿ ಚನ್ನಯ್ಯ ಬೆನ್ನೂರು ಮಠ, ಶಿಮುಲ್ ನಿರ್ದೇಶಕ ಬಿ.ಜಿ.ಹನುಮನಹಳ್ಳಿ ಬಸವರಾಜಪ್ಪ, ಕಾಂಗ್ರೆಸ್ ಮುಖಂಡ ಬಿ.ಸಿದ್ದಪ್ಪ, ಟಿ.ಬಿ.ವೃತ್ತದಲ್ಲಿನ ಕಸಬಾ ಸೊಸೈಟಿಯ ಅಧ್ಯಕ್ಷ ದಿಡಗೂರು ಎ.ಜಿ.ಪ್ರಕಾಶ್, ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ ಮಾತನಾಡಿದರು. ಹರಿಹರದ ನಿವೃತ್ತ ಪ್ರಾಚಾರ್ಯ ಎಚ್.ಎ.ಭಿಕ್ಷಾವರ್ತಿ ಮಠ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯದ ಕುರಿತಾಗಿ ಉಪನ್ಯಾಸ ನೀಡಿದರು. ಶ್ರೀ ಮಂಜುನಾಥ ದೇವರು ದೇವಿ ಪುರಾಣ ವಾಚಿಸಿದರು.

ಓಂಕಾರೇಶ್ವರ ಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು, ಸವಳಂಗ ಕಲ್ಲೇಶ್ವರ ಮಠದ ಅಕ್ಕಮಹಾದೇವಿ ಮಾತಾಜಿ, ಕಾಂಗ್ರೆಸ್ ಮುಖಂಡರಾದ ಎಚ್.ಎ. ಉಮಾಪತಿ, ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಶಿವಯೋಗಿ, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆಯರಾದ ಪುಷ್ಪಾರವೀಶ್, ವನಜಾಕ್ಷಮ್ಮ, ಚನ್ನಪ್ಪಸ್ವಾಮಿ ವಿದ್ಯಾಪೀಠದ ನಿರ್ದೇಶಕ ಕೋರಿ ಮಲ್ಲಿಕಾರ್ಜುನಪ್ಪ, ಮಠದ ವ್ಯವಸ್ಥಾಪಕ ಎಂ.ಪಿ.ಎಂ.ಚನ್ನಬಸಯ್ಯ, ಪತ್ರಕರ್ತ ಎಂ.ಪಿ.ಎಂ.ವಿಜಯಾನಂದ ಕುಮಾರಸ್ವಾಮಿ, ಸವಿತಾ ಉಮೇಶ್ ನಾಡಿಗ್ ಮತ್ತಿತರರು ಉಪಸ್ಥಿತರಿದ್ದರು.

ಕಡದಕಟ್ಟೆ ತಿಮ್ಮಪ್ಪ ಸಂಗೀತ ಸಂಯೋಜಿಸಿ ಹಾಡಿರುವ ಅಂಗದಲ್ಲಿ ಲಿಂಗಧರಿಸಿ ಧ್ವನಿ ಮುದ್ರಿಕೆಯನ್ನು ಗಣ್ಯರು ಬಿಡುಗಡೆಗೊಳಿಸಿದರು.

# ನಗರದಲ್ಲಿ ಇಂದು ಶೋಭಾ ಯಾತ್ರೆ : ಪೊಲೀಸ್ ಪಥಸಂಚಲನ



ದಾವಣಗೆರೆ, ಅ.4- ನಗರದಲ್ಲಿ ನಾಳೆ ದಿನಾಂಕ 5 ರ ಶನಿವಾರ ಜರುಗಲಿರುವ ಹಿಂದೂ ಮಹಾ ಗಣಪತಿ ವಿಸರ್ಜನಾ ಮೆರವಣಿಗೆ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಾಗೂ ಸಾರ್ವಜನಿಕರಲ್ಲಿ ಭಯಮುಕ್ತ ವಾತಾವರಣ ನಿರ್ಮಾಣ ದೃಷ್ಟಿಯಿಂದ ಎಸ್ಪಿ ಶ್ರೀಮತಿ ಉಮಾ ಪ್ರಶಾಂತ್ ನೇತೃತ್ವದಲ್ಲಿ ಇಂದು 'ಪೊಲೀಸ್ ಪಥ ಸಂಚಲನ' ಹಮ್ಮಿಕೊಳ್ಳಲಾಗಿತ್ತು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ. ಸಂತೋಷ ಮತ್ತು ಜಿ ಮಂಜುನಾಥ, ಸಹಾಯಕ ಪೊಲೀಸ್ ಅಧೀಕ್ಷಕ ಸ್ಯಾಮ್ ವರ್ಗೀಸ್, ನಗರ ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ, ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಬಸವರಾಜ ಬಿ. ಎಸ್., ಡಿಎಆರ್ ಡಿವೈಎಸ್ಪಿ ಪಿ.ಬಿ. ಪ್ರಕಾಶ್, ಪೊಲೀಸ್ ನಿರೀಕ್ಷಕರುಗಳಾದ ಗುರುಬಸವರಾಜ, ನೆಲವಾಗಲು ಮಂಜುನಾಥ, ಅಶ್ವಿನ್ ಕುಮಾರ, ಸುನೀಲ್ ಕುಮಾರ್, ನೂರ್ ಅಹಮ್ಮದ್, ಶ್ರೀಮತಿ ಪ್ರಭಾವತಿ, ಶ್ರೀಮತಿ ಮಲ್ಲಮ್ಮ, ಅಶ್ವಿನ್ ಕುಮಾರ್, ಶ್ರೀಮತಿ ಚೌಬೆ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಮಹಿಳೆಯರ ಸತ್ಯಾಗ್ರಹ ಸ್ಥಳಕ್ಕೆ ಶಾಸಕರ ಭೇಟಿ

**ರಾಣೇಬೆನ್ನೂರು**

ರಾಣೇಬೆನ್ನೂರು,ಅ.4- ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಗರ್ಭಕೋಶ ಚಿಕಿತ್ಸೆ ಮಾಡಿಸಿಕೊಂಡು, ವಿವಿಧ ಆರೋಗ್ಯ ಸಮಸ್ಯೆಗಳಿಂದ ನರಳುತ್ತಿದ್ದು, ಸರ್ಕಾರದ ಸಹಾಯ ಧನಕ್ಕಾಗಿ ಕಳೆದೆರಡು ದಿನಗಳಿಂದ ತಹಶೀಲ್ದಾರ್ ಕಛೇರಿ ಎದುರು ಸತ್ಯಾಗ್ರಹ ನಡೆಸುತ್ತಿರುವ ಮಹಿಳೆಯರನ್ನು ಭೇಟಿ ಮಾಡಿದ ಶಾಸಕ ಪ್ರಕಾಶ ಕೋಳಿವಾಡ ಅವರು, ಈಗಾಗಲೇ ಈ ಕುರಿತು ಮುಖ್ಯಮಂತ್ರಿ ಹಾಗೂ ಆರೋಗ್ಯ ಮಂತ್ರಿಗಳ ಜೊತೆ ಮಾತನಾಡಿದ್ದು, ಮತ್ತೆ ಒತ್ತಡ ತರುವುದಾಗಿ ತಿಳಿಸಿದರು.





# ಮಲೇಬೆನ್ನೂರಿನಲ್ಲಿ ಲಲಿತ ಸಹಸ್ರನಾಮ ಪಾರಾಯಣ

ಮಲೇಬೆನ್ನೂರು, ಅ. 4- ಪಟ್ಟಣದ ಹೊರವಲಯದಲ್ಲಿರುವ ಭದ್ರಕಾಳಿ ಸಮೇತ ವೀರಭದ್ರೇಶ್ವರ ದೇವಸ್ಥಾನದಲ್ಲಿ ದಸರಾ ಮಹೋತ್ಸವದ ಅಂಗವಾಗಿ ಮತ್ತು ಲೋಕ ಕಲ್ಯಾಣಾರ್ಥವಾಗಿ 120 ಕ್ಕೂ ಹೆಚ್ಚು ಮಹಿಳೆಯರಿಂದ ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣ ಮಾಡಲಾಯಿತು. ಮಲೇಬೆನ್ನೂರು, ಕುಂಬಳೂರು, ಜಿಗಳಿ, ಹರಿಹರ ಮತ್ತು ಕಮ್ಮಾರಗಟ್ಟೆ ಗ್ರಾಮದಿಂದ ಮಹಿಳೆಯರು ಭಾಗವಹಿಸಿದ್ದರು. ನವದುರ್ಗೆಯರ ಅವತಾರದಲ್ಲಿದ್ದ ಮಕ್ಕಳು ಎಲ್ಲರ ಗಮನ ಸೆಳೆದರು.

# ಆಂಜನೇಯ ಬಡಾವಣೆಯ ಬಸವೇಶ್ವರ ಉದ್ಯಾನವನದಲ್ಲಿ ಸ್ವಚ್ಛತಾ ಕಾರ್ಯಕ್ರಮ



ದಾವಣಗೆರೆ, ಅ. 4- ಗಾಂಧಿ ಜಯಂತಿಯಂದು ಆಂಜನೇಯ ಬಡಾವಣೆಯ ಬಸವೇಶ್ವರ ಉದ್ಯಾನವನದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಆಂಜನೇಯ ಬಡಾವಣೆ ಹಿತರಕ್ಷಣಾ ಸಮಿತಿಯ ಈಶ್ವರಪ್ಪ, ಕುಸುಮ ಲೋಕೇಶ್, ಶ್ರೀನಿವಾಸ್ ರೆಡ್ಡಿ, ಮಮತಾ ನಾಗರಾಜ್, ಮಲ್ಲಿಕಾರ್ಜುನ್, ಸುಜಾತ ರವಿ, ಛತ್ರಪತಿಯವರು ಶ್ರಮದಾನದಲ್ಲಿ ಭಾಗವಹಿಸಿದ್ದರು.

# ಹರಿಹರ : ಕಾಂಗ್ರೆಸ್‌ನಿಂದ ಗಾಂಧೀಜಿ, ಶಾಸ್ತ್ರೀಜಿ ಜಯಂತಿ



ಹರಿಹರ, ಅ.4- ನಗರದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆ ಮಾಡಲಾಯಿತು.

ಈ ವೇಳೆ ನಗರದ ಗಾಂಧಿ ವೃತ್ತದಿಂದ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಭಾವಚಿತ್ರದೊಂದಿಗೆ ಹೊರಟ ಮೆರವಣಿಗೆಯು ಮಹಾತ್ಮ ಗಾಂಧಿ ವೃತ್ತದಿಂದ ಆರಂಭಗೊಂಡು ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆಗಳಲ್ಲಿ ಸಂಚರಿಸಿ ಹೈಸ್ಕೂಲ್ ಬಡಾವಣೆಯ ಅಂಬೇಡ್ಕರ್ ಭವನಕ್ಕೆ ತಲುಪಿ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಪಕ್ಷದ ಮುಖಂಡರಾದ ಎಂ. ನಾಗೇಂದ್ರಪ್ಪ, ನಂದಿಗಾವಿ ಶ್ರೀನಿವಾಸ್, ಗುತ್ತೂರು ಹಾಲೇಶ್ ಗೌಡ್ರು, ಟಿ.ಜೆ. ಮುರುಗೇಶಪ್ಪ, ಬಿ.ರೇವಣಸಿದ್ದಪ್ಪ, ಅಮರಾವತಿ ರೇವಣಸಿದ್ದಪ್ಪ, ಮಂಜುನಾಥ್ ಪಾಟೀಲ್, ಕುಂಬಳೂರು ವಿರುಪಾಕ್ಷಪ್ಪ, ಮಹಮ್ಮದ್ ಫೈರೋಜ್, ಸನಾವುಲಾ ಸಾಬ್, ಅಬ್ದುಲ್ ಅಲಿಂ, ಬಾಬುಲಾಲ್, ಎಲ್.ಬಿ. ಹನುಮಂತಪ್ಪ, ಬಬ್ಲೂ ಪೈಲ್ವಾನ್, ಅಬಿದಾಲಿ, ಕೆ.ಪಿ. ಗಂಗಾಧರ್, ಸಂತೋಷ ನೋಟದರ್, ವಿಜಯಕುಮಾರ್, ಹಲಗೇರಿ ನಜೀರ್ ಸಾಬ್, ದಾದಾಪೀರ್ ಭಾನುವಳ್ಳಿ, ಜಿಗಳಿ ಆನಂದಪ್ಪ ಇತರರು ಹಾಜರಿದ್ದರು.

# ಎಂಬ್ರಾಯಿಡರಿ, ಆರಿ ವರ್ಕ್ ತರಬೇತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಅ. 4- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಎಂಬ್ರಾಯ್ಡರಿ, ಆರಿ ವರ್ಕ್ ಮತ್ತು ಫ್ಯಾಬ್ರಿಕ್ ಪೇಟಿಂಗ್ ಕುರಿತ 30 ದಿನಗಳ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇದೇ ದಿನಾಂಕ 8 ಕೊನೆ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ದೂ. ಸಂ. 9740982585, 9380162042 ಗೆ ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಶಾಖೆಯ ನಿರ್ದೇಶಕ ರವಿಕುಮಾರ್ ತಿಳಿಸಿದ್ದಾರೆ.

**ಭದ್ರಾ ಜಲಾಶಯ**

ನೀರಿನ ಮಟ್ಟ : 186

ಒಳ ಹರಿವು : 4884 ಕ್ಯೂಸೆಕ್ಸ್

ಹೊರ ಹರಿವು : 5486 ಕ್ಯೂಸೆಕ್ಸ್

ಕಳೆದ ವರ್ಷ : 159 ಅಡಿ

**ಎರೇಬೂದಿಹಾಳ್ ಬಿ.ಎಂ. ಕುಬೇರಪ್ಪ ನಿಧನ**



ಹರಿಹರ ತಾಲ್ಲೂಕು ಎರೇಬೂದಿಹಾಳ್ ಗ್ರಾಮದ ದಿ. ಮೂಲೇರ ಕೆಂಚಪ್ಪನವರ ಪುತ್ರ ಬಿ.ಎಂ. ಕುಬೇರಪ್ಪ (68) ಇವರು ದಿನಾಂಕ : 04.10.2024ರ ಶುಕ್ರವಾರ ಸಂಜೆ 6.30ಕ್ಕೆ ನಿಧನರಾದರು. ಪತ್ನಿ, ಸಹೋದರರು, ಸಹೋದರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 05.10.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಎರೇಬೂದಿಹಾಳ್ ಗ್ರಾಮದಲ್ಲಿ ನೆರವೇರಿಸಲಾಗುವುದು.

# ಹರಪನಹಳ್ಳಿ : ಅರ್ಥಪೂರ್ಣ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವಕ್ಕೆ ತೀರ್ಮಾನ

ಹರಪನಹಳ್ಳಿ, ಅ. 4 - ಇದೇ ದಿನಾಂಕ 17 ರಂದು ನೆಡಯಲಿರುವ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ತಪ್ಪದೇ ಭಾಗವಹಿಸ ಬೇಕು ಎಂದು ತಹಶೀಲ್ದಾರ್ ಹೇಳಿದರು.

ಪಟ್ಟಣದ ಸಾಮರ್ಥ್ಯ ಸೌಧದಲ್ಲಿ ಕರೆಯಲಾಗಿದ್ದ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾ ಡಿದ ಅವರು, ತಾಲ್ಲೂಕಿನಲ್ಲಿ ಹೆಚ್ಚು ಜನಸಂಖ್ಯೆ ಹೊಂದಿರುವ ವಾಲ್ಮೀಕಿ ನಾಯಕ ಸಮುದಾಯವರು ತಮ್ಮ ತಮ್ಮ ಹಳ್ಳಿಯಲ್ಲಿ ಯಾವ ದಿನವಾದರೂ ಜಯಂತಿಯನ್ನು ಆಚರಿಸಿಕೊಳ್ಳಿ, ಆದರೆ ಸರ್ಕಾರದಿಂದ ಆಚರಣೆ ಮಾಡುವ ಜಯಂತಿಗೆ ಬಂದು ಭಾಗವಹಿಸುವಂತೆ ಕರೆ ನೀಡಿದರು.



ಸಮಾಜದ ಹಿರಿಯ ಕಲಾವಿದರು, ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಸನ್ಮಾನಿಸಿ ಗೌರವಿಸಲಾಗುವುದು ಎಂದು ಅವರು ತಿಳಿಸಿದರು. ಅಂದು ಬೆಳಿಗ್ಗೆ 10 ಗಂಟೆಗೆ ಅರಸೀಕೇರಿ ರಸ್ತೆಯ ಬಳಿ ಇರುವ ವಾಲ್ಮೀಕಿ ಸಮುದಾಯದಿಂದ ಮೆರವಣಿಗೆ ಮೂಲಕ ಹಿರೇಕೆರೆಯ ವೃತ್ತವನ್ನು ಒಳಗೊಂಡು ಹೊಸಪೇಟೆ ರಸ್ತೆಯ ಮೂಲಕ ಪ್ರವಾಸಿ ಮಂದಿರದವರೆಗೆ ಆಚರಿಸಲು ನಿರ್ಣಯಿಸಲಾಯಿತು. ನಂತರ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹರ್ಷಿ ವಾಲ್ಮೀಕಿ ಕುರಿತು ವಿಶೇಷ ಉಪನ್ಯಾಸ ನೀಡಲಾಗುವುದು ಎಂದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ. ಅಣಪ್ಪ ಮಾತನಾಡಿ, ಮಹರ್ಷಿ ವಾಲ್ಮೀಕಿ ಜಯಂತಿಗೆ ತಾಲ್ಲೂಕಿನ ವಾಲ್ಮೀಕಿ ನಾಯಕ ಬಂಧುಗಳು ಕಡ್ಡಾಯವಾಗಿ ಭಾಗವಹಿಸುವ ಮೂಲಕ ಅರ್ಥಪೂರ್ಣ ಕಾರ್ಯಕ್ರಮ ಮಾಡಲು ಪ್ರತಿಯೊಬ್ಬರ ಸಹಕಾರ ಬಹುಮುಖ್ಯ ಎಂದರು.

ಸಮಾಜ ಕಲ್ಯಾಣ ಅಧಿಕಾರಿ ಗಂಗಪ್ಪ, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ್, ಅಭಿಯಂತರ ಕುಬೇಂದ್ರನಾಯ್ಕ್, ಪರಿಶಿಷ್ಟ ಪಂಗಡ ಕಲ್ಯಾಣ ಅಧಿಕಾರಿ ಇಬ್ರಾಹಿಂ, ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಮುಖಂಡರಾದ ನಾಗರಾಜ, ಗಿರಜ್ಜಿ ಶಿವಾನಂದ, ವಾಗೀಶ ವಕೀಲರು, ರೇವಣಸಿದ್ದಪ್ಪ, ಸುರೇಶ್ ಮಂಡಕ್ಕಿ, ಅಂಜಿನಪ್ಪ ತೆಲಗಿ, ಶಿವಪ್ಪ ತೆಲಿಗಿ, ಶಿವರಾಜ್, ಪ್ರಕಾಶ, ಆರ್. ಮಂಜುಳಾ, ಪದ್ಮಾವತಿ ಗುಂಡಗತ್ತಿ, ನೇತ್ರಾವತಿ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

# ರಾಣೇಬೆನ್ನೂರಿನಲ್ಲಿ ಇಂದು 'ವೀಣಾ ವಾದನ'

ನಾಡ ಹಬ್ಬ ದಸರಾ ಪ್ರಯುಕ್ತ ರಾಣೇಬೆನ್ನೂರಿನ ಕರ್ನಾಟಕ ಸಂಘದ ವತಿಯಿಂದ ನಗರದ ಆಲೂರು ವೆಂಕಟರಾವ್ ರಂಗಮಂದಿರದ ಕಾಳಿದಾಸ ನಾಯ್ಕ ವೇದಿಕೆಯಲ್ಲಿ ಇಂದು ಸಂಜೆ 6.30 ಕ್ಕೆ ಅಶ್ವಿನಿ ಎನ್. ಮೈಸೂರು ಇವರಿಂದ 'ವೀಣಾ ವಾದನ' ಕಾರ್ಯಕ್ರಮ ನಡೆಯಲಿದೆ. ಕರ್ನಾಟಕ ಸಂಘದ ಅಧ್ಯಕ್ಷ ಸಂಜೀವ ಶಿರಹಟ್ಟಿ ಅಧ್ಯಕ್ಷತೆ ವಹಿಸುವರು. ಸಾಹಿತಿ, ಚಲನಚಿತ್ರ ಕಲಾವಿದ ಸುರೇಶ್ ಕಣೇಕಲ್ ಹಾವೇರಿ, ರಾಣೇಬೆನ್ನೂರು ನಗರಸಭೆ ಸದಸ್ಯೆ ತ್ರಿವೇಣಿ ನಾ ಪವಾರ್ ಭಾಗವಹಿಸಲಿದ್ದಾರೆ.

# ಎಸ್.ಬಿ.ಕೆ.ಎಂ. ಶಾಲೆಯ ಹಳೇ ವಿದ್ಯಾರ್ಥಿಗಳಿಂದ ಶಾಲಾಭಿವೃದ್ಧಿಗೆ ನೆರವು



ಮಲೇಬೆನ್ನೂರು, ಅ.4- ಇಲ್ಲಿನ ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಮಾಜಿ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದಿಂದ ದತ್ತು ಪಡೆದಿರುವ ಶಾಲೆಯ ಎಲ್ಲಾ 97 ಮಕ್ಕಳಿಗೆ ಸಮವಸ್ತ್ರ, ಶೂ, ಸಾಕ್ಸ್, ಸ್ಕೂಲ್‌ಬ್ಯಾಗ್‌ಗಳನ್ನು ವಿತರಿಸಿ, ಗಮನ ಸೆಳೆದರು

ಅಲ್ಲದೆ, ಶಾಲೆಯ ಅಭಿವೃದ್ಧಿಗೆ 1 ಲಕ್ಷ ರೂ.ಗಳ ಚೆಕ್ಕನ್ನು ಹಳೇ ವಿದ್ಯಾರ್ಥಿಗಳ ಸಂಘದ ಗೌರವಾಧ್ಯಕ್ಷ ಪಿ. ಹೆಚ್. ಶಿವಕುಮಾರ್, ಕಾರ್ಯದರ್ಶಿ ಜಿ. ಬೇವಿನಹಳ್ಳಿಯ ಮಾಜಿ ಗೌಡ್ರ ಶಿವರಾಜ್ ಮತ್ತು ಖಜಾಂಚಿ ಎಂ. ಕೆ. ಗಜೇಂದ್ರಸ್ವಾಮಿ ಅವರು ಶಾಲಾ ಆಡಳಿತ ಮಂಡಳಿಯವರಿಗೆ ವಿತರಿಸಿದರು.

ಇದೇ ವೇಳೆ ಸಣ್ಣ ಸಂಗಾಪುರದ ಮಹೇಶ್ವರಯ್ಯ ಚಾವಡಿ ಅವರು ಶಾಲಾ ಮಕ್ಕಳಿಗೆ ಉಚಿತವಾಗಿ 500 ನೋಟ್‌ಬುಕ್‌ಗಳನ್ನು ನೀಡಿದರು.

ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ. ವಿಜಯರಾಘವ, ಉಪಾಧ್ಯಕ್ಷ ಡಾ. ಬಿ. ಚಂದ್ರಶೇಖರ್, ಕಾರ್ಯದರ್ಶಿ ಹೆಚ್. ಜಿ. ಚಂದ್ರಶೇಖರ್, ನಿರ್ದೇಶಕರಾದ ಜಿಗಳಿ ಇಂದೂಧರ್, ಎಂ.ಆರ್. ಮಾರಪ್ಪ, ಶಾಂತಮ್ಮ ಎಂ.ಕೆ. ನಾಗರಾಜ್, ಎಸ್‌ಡಿಎಂಸಿ ಅಧ್ಯಕ್ಷ ಸನಾವುಲ್ಲಾ, ಬಸಾಪುರದ ಗದಿಗೆಯ್ಯ, ಶಂಕ್ರಮ್ಮ, ಶಾಲಾ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಶಿಕ್ಷಕರಾದ ಯಂಕಾನಾಯ್ಕ, ಜಿ.ಕೆ. ಬಸವರಾಜಪ್ಪ, ಸಿ. ಹನುಮಂತಪ್ಪ, ಪ್ರೇಮಲೀಲಾ ಬಾಯಿ, ಎಂ.ಕೆ. ಸುನೀಲ್ ಈ ವೇಳೆ ಹಾಜರಿದ್ದರು.

# ಹರಿಹರದಲ್ಲಿ ನಾಳೆ ಪದಗ್ರಹಣ ಸಮಾರಂಭ

ಹರಿಹರ,ಅ.4- ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಸೋಮನಗೌಡ ಪಾಟೀಲ್ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಪರಮೇಶ್ವರ ಪಟ್ಟಣ್ಣ ಶೆಟ್ಟಿ ಅವರ ಪದಗ್ರಹಣ ಕಾರ್ಯಕ್ರಮವನ್ನು ಅ.6 ರಂದು ಬೆಳಗ್ಗೆ 11ಕ್ಕೆ ನಗರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಹಮ್ಮಿಕೊಳ್ಳಲಾಗಿದೆ.

ಪಂಚಮಸಾಲಿ ಜಗದ್ಗುರು ಪೀಠದ ಪೀಠಾಧ್ಯಕ್ಷರಾದ ವಚನಾನಂದ ಶ್ರೀಗಳು, ಅಲಗೂರು ಪಂಚಮಸಾಲಿ ಜಗದ್ಗುರು ಪೀಠದ ಮಹಾದೇವ ಶ್ರೀಗಳು ಸಾನ್ನಿಧ್ಯ ವಹಿಸುವರು. ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಚಿವರಾದ ಶಿವಾನಂದ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕರಾದ ಸಿ.ಸಿ.ಪಾಟೀಲ್, ಎಂ.ಆರ್. ಪಾಟೀಲ್, ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ವಿನಯ್ ಕುಲಕರ್ಣಿ, ಶಂಕರ್ ಪಾಟೀಲ್ ಮುನೇನಕೊಪ್ಪ, ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವೀರಶೈವ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಎಸ್.ಕಾಶಪ್ಪ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

ನಿಯೋಜಿತ ಅಧ್ಯಕ್ಷ ಸೋಮನಗೌಡ ಪಾಟೀಲ್, ಪ್ರಧಾನ ಕಾರ್ಯದರ್ಶಿ ಹೆಚ್.ಪಿ. ಪರಮೇಶ್ವರಪ್ಪ, ಬಾವಿ ಬೆಟ್ಟಪ್ಪ, ಬಸವರಾಜ್ ದಿಂಡೂರು, ಬಿ.ನಾಗನಗೌಡ್ರು, ಪೀಠದ ಆಡಳಿತಾಧಿಕಾರಿ ಡಾ. ಹೆಚ್.ಪಿ. ರಾಜ್‌ಕುಮಾರ್ ಸೇರಿದಂತೆ ಸಮಾಜದ ಜನಪ್ರತಿನಿಧಿಗಳು, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು, ಜಿಲ್ಲಾ ಅಧ್ಯಕ್ಷರುಗಳು, ತಾಲ್ಲೂಕು ಅಧ್ಯಕ್ಷರುಗಳು ಆಗಮಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.

# ಗಾಂಧೀಜಿ, ಶಾಸ್ತ್ರೀಜಿ ಗುಣಗಳು ಮಕ್ಕಳಲ್ಲಿ ಬರಬೇಕು

ಹರಪನಹಳ್ಳಿ, ಅ.4- ಈಗಿನ ಮಕ್ಕಳಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರಂತಹ ಶ್ರೇಷ್ಠ ಗುಣಗಳು ಬೆಳೆಯಬೇಕು ಎಂದು ತೆಲಗಿ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಪ್ರಕೃತಿ ವಿದ್ಯಾ ಸಂಸ್ಥೆಯ ಪರ್ಲ್ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಸಾಹಿತ್ಯ ಹಾಗೂ ಇತಿಹಾಸದ ಕಡೆ ಹೆಚ್ಚು ಗಮನ ಹರಿಸಬೇಕು ಎಂದರು.

ಪ್ರಕೃತಿ ವಿದ್ಯಾ ಸಂಸ್ಥೆಯ ಗೌರವ ಅಧ್ಯಕ್ಷ ಶಶಿಧರ್ ಪೂಜಾರ್ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಮಹಾತ್ಮರು ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ ಅವರನ್ನು ಜನ್ಮದಿನದಂದು ಮಾತ್ರವಲ್ಲದೆ, ಪ್ರತಿದಿನವೂ ಸಹ ನೆನೆಯಬೇಕು ಎಂದರು

ಅಧ್ಯಕ್ಷ ಮಂಜುನಾಥ್ ಪೂಜಾರ್ ಮಾತನಾಡಿ, ಶಾಸ್ತ್ರೀಜಿ ಹಾಗೂ ಗಾಂಧೀಜಿಯವರ ನಡೆ ನುಡಿಗಳು ಮತ್ತು ಏಕತಾ ನಿರ್ಧಾರ ದೇಶವನ್ನು ಮುನ್ನಡೆಸುವಲ್ಲಿ ಯಶಸ್ವೀ ಪಾತ್ರವನ್ನು ನಡೆಸಿತು. ಅಂತಹ ದೇಶಭಕ್ತರು ಹಾಗೂ ರಾಜಕಾರಣಿಗಳು ಮತ್ತೆ ಹುಟ್ಟಬೇಕು ಎಂದರು.



**ತೆಲಗಿ ಹೋಬಳಿ ಕಸಾಪ ಅಧ್ಯಕ್ಷ ಕೆ.ಎಸ್ ವೀರಭದ್ರಪ್ಪ**

ಇದೇ ಸಂದರ್ಭದಲ್ಲಿ ಪ್ರಕೃತಿ ವಿದ್ಯಾ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಚೆನ್ನೇಶ್ ಬಣಕಾರ್, ಉಪಾಧ್ಯಕ್ಷ ನಾಗೇಶ್ ಉಪ್ಪಿನ್, ಕಾರ್ಯದರ್ಶಿ ಮಾಲತೇಶ ಚಳಗೇರಿ, ಖಜಾಂಚಿ ಬಸವರಾಜ್ ಹುಲ್ಲತ್ತಿ, ನಿರ್ದೇಶಕ ವಿರೂಪಾಕ್ಷಪ್ಪ, ಪ್ರಾಂಶುಪಾಲೆ ಸುಮ ನಾಗೇಶ್ ಉಪ್ಪಿನ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು



"ಪಿಂಡಯಾ ಪ್ರವರಾರೂಢಾ ಚಂಡಕೋಪಾಸ್ತ್ರಕೈರ್ಯುತಾ
ಪ್ರಸಾದಂ ತನುತೇ ಮಹ್ಯಂ ಚನ್ದ್ರಘಂಟೇತಿ ವಿಶ್ರುತಾ"

ನವರಾತ್ರಿ ಉತ್ಸವ....

# ಚಂದ್ರಘಂಟಾ ದೇವಿ - ಒಂದು ಚಿಂತನೆ

**ನವ ದುರ್ಗೆಯರ ಮೂರನೇ ರೂಪ**

ಚಂದ್ರಘಂಟಾ ಎಂಬ ಹೆಸರಿನ ದೇವಿಯೇ, ನೀನು ಸಿಂಹ ವಾಹಿನಿಯಾಗಿ ಅನೇಕ ಆಯುಧಗಳನ್ನು ಹಿಡಿದಿದ್ದೀಯೇ, ನನ್ನ ಮೇಲೆ ಪ್ರಸನ್ನಳಾಗಿ ನನಗೆ ನಿನ್ನ ಪ್ರಸಾದವನ್ನು ನೀಡು ಎಂಬುದು ಈ ಶ್ಲೋಕದ ಅರ್ಥ.

ನವದುರ್ಗೆಯರ ಮೂರನೇ ರೂಪ ಚಂದ್ರಘಂಟಾ ದೇವಿ. ಇವಳಿಗೆ 10 ಕೈಗಳು , ಸಿಂಹ ವಾಹನದ ಮೇಲೆ ಕುಳಿತಿರುತ್ತಾಳೆ, ಮೂರನೇ ಕಣ್ಣು ಯಾವಾಗಲೂ ತೆರೆದಿರುತ್ತದೆ ಮತ್ತು ದೈತ್ಯರ ಸಂಹಾರವನ್ನು ಮಾಡುತ್ತದೆ.

ಹತ್ತು ಕೈಗಳಲ್ಲಿ, ತ್ರಿಶೂಲ,ಖಡ್ಗ,ಗಧೆ ಬಿಲ್ಲು, ಬಾಣ, ಕಮಲದ ಹೂವು, ಗಂಟೆ, ಜಪಮಣಿ, ಕಮಂಡಲ ಮತ್ತು ಒಂದು ಕೈಯಲ್ಲಿ ಅಭಯ ಮುದ್ರೆ ತೋರಿಸುತ್ತಾಳೆ. ಇವಳನ್ನು ಚಂದ್ರಿಕಾ,ಚಂಡಿಕಾ, ರಣಚಂಡಿ ಎಂದೂ ಕರೆಯುತ್ತಾರೆ. ಪೀತಾಂಬರವನ್ನು ಉಟ್ಟಿರುವ ತಾಯಿ, ಹಣೆಯ ಮೇಲೆ ಘಂಟೆಯನ್ನು ಚಿತ್ರಿಸುವ ಅರ್ಧಚಂದ್ರ ಧರಿಸುತ್ತಾಳೆ.ಆದ್ದರಿಂದ ಅವಳಿಗೆ ಚಂದ್ರಘಂಟಾ ಎಂದು ಹೆಸರು.

ಘಂಟಾ ನಾದದಿಂದ ದುಷ್ಟ ಶಕ್ತಿಗಳು ದೂರ ಹೋಗುತ್ತವೆ. ಚಂದ್ರಘಂಟಾ ದೇವಿಯು ಇರುವ ಕಡೆ ದುಷ್ಟ ಶಕ್ತಿಗಳು ಬರುವುದಿಲ್ಲ.ಚಂದ್ರಘಂಟಾ ದೇವಿ ಯುದ್ಧ ಸಮಯದಲ್ಲಿ ಮಾಡಿದ ಘಂಟಾನಾದದ ಗುಡುಗಿನ ಶಬ್ದ ರಾಕ್ಷಸರನ್ನು ಪಾರ್ಶ್ವವಾಯುಗೆ ಒಳಪಡಿಸಿ ದಿಗ್ಭ್ರಮೆಗೊಳಿಸಿತು ಎನ್ನುತ್ತಾರೆ.

ಯುದ್ಧಕ್ಕೆ ಸಿದ್ಧಳಾದ ದೇವಿಯಾದರೂ ಕಾರುಣ್ಯ ಸ್ವರೂಪಿಣಿಯಾಗಿದ್ದಾಳೆ ಮತ್ತು ತನ್ನ ಭಕ್ತರಿಗೆ ಶಾಂತಿ, ನೆಮ್ಮದಿ, ಸಮಾಧಾನಗಳನ್ನು ಕೊಡುವ ದೇವಿಯಾಗಿದ್ದಾಳೆ.

ಪುರಾಣದ ಕಥೆಯ ಪ್ರಕಾರ, ತನ್ನನ್ನು ತಪಸ್ಸಿನಿಂದ ಒಲಿಸಿಕೊಂಡ ಪಾರ್ವತಿಯನ್ನು ವರಿಸಲು ಶಿವನು ತನ್ನ ಅತ್ಯಂತ ಘೋರವಾದ ನಿಜರೂಪದಿಂದ , ಗಣಗಳ ಸಹಿತನಾಗಿ ಪಾರ್ವತಿಯ ಮನೆಗೆ ಮದುವೆಗಾಗಿ ಬಂದಾಗ, ಪಾರ್ವತಿಯ ತಾಯಿ ಮೈನಾವತಿ ಶಿವನ ರೂಪವನ್ನು ನೋಡಿ ಮೂರ್ಛೆ ಹೋಗುತ್ತಾಳೆ. ಆಗ ಪಾರ್ವತಿಯು ಚಂದ್ರಘಂಟಾ ದೇವಿಯ ರೂಪದಿಂದ ಅವತರಿಸಿ ಶಿವನನ್ನು ರಾಜಕುಮಾರನಂತೆ ಬರಲು ಪ್ರಾರ್ಥಿಸುತ್ತಾಳೆ. ಆಗ ಶಿವನು ಅತ್ಯಂತ ಸುಂದರ ರೂಪದಿಂದ ಬಂದು ಅವಳನ್ನು ವಿವಾಹವಾಗುತ್ತಾನೆ.

ಚಂದ್ರಘಂಟಾ ದೇವಿಯ ರೂಪವು, ದೇವಿಯ ವೈವಾಹಿತ ರೂಪ.ಅತ್ಯಂತ ಸುಂದರ ರೂಪ.

ಶಿವಪುರಾಣದ ಪ್ರಕಾರ ಚಂದ್ರಶೇಖರ ರೂಪದ ಶಿವನ ಶಕ್ತಿ "ಚಂದ್ರಘಂಟಾ".ಶಿವ ಶಕ್ತಿಯರು ಸೇರಿರುವ ರೂಪ ಅರ್ಧನಾರೀಶ್ವರ.

ಯೋಗ ಸಾಧನೆಗೆ ಈ ದೇವಿಯನ್ನು ಮಣಿಪೂರಕ ಚಕ್ರದಲ್ಲಿ ಧ್ಯಾನಿಸುತ್ತಾರೆ.ಇದರಿಂದ ಬೇಗ ಸಿದ್ಧಿಯಾಗುತ್ತದೆ ಎಂಬ ನಂಬಿಕೆ ಇದೆ. ಮಣಿಪೂರ ಚಕ್ರ ಅವಳ ವಾಸಸ್ಥಾನ.

ದುಷ್ಟ ಜನರನ್ನು ಭಸ್ಮಮಾಡುವ ಕಣ್ಣುಳ್ಳ ಈ ತಾಯಿಯು, ಶಿಷ್ಟ ಜನರನ್ನು ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ತಾಯಿಯ ಕೃಪಾಕಟಾಕ್ಷ ಒಂದು ನಮ್ಮ ಮೇಲಿದ್ದರೆ ಯಾವ ಕಷ್ಟ ಕಾರ್ಪಣ್ಯಗಳು ಬರುವುದಿಲ್ಲ.

ಶಾಂತಿ, ನೆಮ್ಮದಿ ಎರಡು ಮಾನವನಿಗೆ ಅತೀ ಮುಖ್ಯ . ಎಷ್ಟು ದುಡ್ಡಿದ್ದರೂ ಇದನ್ನು ಕೊಳ್ಳಲು ಸಾಧ್ಯವಿಲ್ಲ .ಮನಃಶ್ಯಾಂತಿ ಇಲ್ಲದಿದ್ದರೆ ಏನಿದ್ದರೂ ಸಂತೋಷವಿರುವುದಿಲ್ಲ. ಶಂ ಎಂದರೆ ಆನಂದ, ಅಂತ ಎಂದರೆ ಅದರ ತುತ್ತ ತುದಿ. ಶಾಂತಿ ಎಂದರೆ ಆನಂದದ ಅತ್ಯಂತ ಎತ್ತರದ ಸ್ತರ. ಇದನ್ನು ಆ ದೇವಿ ದಯಪಾಲಿಸುತ್ತಾಳೆ.ಇಂತಹ ಚಂದ್ರಘಂಟಾದೇವಿಯು ನಮ್ಮನ್ನೆಲ್ಲಾ ರಕ್ಷಿಸಲಿ ಎಂದು ಪ್ರಾರ್ಥಿಸುತ್ತಾ, ನಾವು ದೇವಿಯ ರೂಪವನ್ನು ಧ್ಯಾನ ಮಾಡೋಣ, ಸ್ತುತಿಸೋಣ ಶರಣಾಗೋಣ.

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

# ಒಳ್ಳೆಯ ಕಾರ್ಯಗಳಿಂದ ಬದುಕು ಸಮೃದ್ಧಿ

## ಯಲವಟ್ಟಿ : ಮಹಾಲಯ ಅಮವಾಸ್ಯೆ ಸತ್ಸಂಗದಲ್ಲಿ ಯೋಗಾನಂದಶ್ರೀ ಅಭಿಮತ

ಮಲೇಬೆನ್ನೂರು, ಅ. 4- ಒಳ್ಳೆಯ ಕಾರ್ಯಗಳು ಹಾಗೂದಾನ,ಧರ್ಮಗಳಿಂದಾಗಿಬದುಕುಸಮೃದ್ಧಿಗೊಳ್ಳುವುದರ ಜೊತೆಗೆ ಸಾರ್ಥಕತೆ ಪಡೆಯುತ್ತದೆ ಎಂದು ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಅವರು ಬುಧವಾರ ಸಂಜೆ ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದಲ್ಲಿ ಮಹಾಲಯ ಅಮವಾಸ್ಯೆ ಪ್ರಯುಕ್ತ ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ನೀವು ನಿಮ್ಮ ಕಾಯಕದಲ್ಲೂ ಭಕ್ತಿ, ನಿಷ್ಠೆ ಬೆಳೆಸಿಕೊಳ್ಳಬೇಕು. ಬದುಕಿನಲ್ಲಿ ಎಲ್ಲರನ್ನೂ ಪ್ರೀತಿ, ಗೌರವದಿಂದ ಕಂಡಾಗ ನಿಮ್ಮ ಮನಸ್ಸು ಉಲ್ಲಾಸಗೊಳ್ಳುತ್ತದೆ.

ಭಗವಂತನ ಜಪ, ತಪ ಮಾಡುವ ಮೂಲಕ ಅವನ ಪ್ರೀತಿಗೆ ಪಾತ್ರರಾಗಬೇಕು ಮತ್ತು ಮನೆಯ ಹಿರಿಯರ ಸ್ಮರಣೆ ಕೂಡಾ ಬದುಕಿಗೆ ದಾರಿದೀಪವಾಗುತ್ತದೆ ಎಂದ ಸ್ವಾಮೀಜಿ ಅವರು, ಪಿತೃಪಕ್ಷದ ಮಹತ್ವ ತಿಳಿಸಿದರು.

ಹಿರಿಯರಾದ ಕುಂಬಳೂರಿನ ಕೆ. ತೀರ್ಥಪ್ಪ, ನಿವೃತ್ತ ಶಿಕ್ಷಕ ಕೆ.ಎನ್. ಹಳ್ಳಿಯ ಹೆಚ್.ಎನ್.ತಿಪ್ಪೇಶ್ ಅವರು ಮಾತನಾಡಿ, ಇಂತಹ ಸತ್ಸಂಗ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ, ಸಮಾನತೆಯ ಜೊತೆಗೆ ಬದುಕಿಗೆ ಸಂತೃಪ್ತಿ ತರುತ್ತವೆ ಎಂದರು.



ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಕುಂಬಳೂರಿನ ಶಂಕರಗೌಡ, ದೇವರಾಜ್, ಉಮಾಪತಿ , ಹೊಳೆಸಿರಿಗೆರೆಯ ಮಾಗೋಡ ಸಿದ್ದಪ್ಪ, ಕುಂದೂರು ಮಂಜಪ್ಪ, ಪತ್ರಕರ್ತ ಜಿಗಳಿ ಪ್ರಕಾಶ್, ಕೆ.ಎಸ್. ಮಾಲತೇಶ್, ಮಂಜಪ್ಪ, ಯಲವಟ್ಟಿಯ ಹೊಸಮನಿ ಮಲ್ಲಪ್ಪ, ಎ. ಸುರೇಶ್, ಹೊರಟ್ಟಿ ಕರಿಬಸಪ್ಪ, ಕೆ. ಮಂಜಪ್ಪ, ಡಿ. ರಾಜಪ್ಪ, ಸುರೇಶ್ ಶ್ರೇಷ್ಠಿ, ಬಿ.ಜಿ. ಮಲ್ಲೇಶಪ್ಪ, ಎ. ಜಗದೀಶ್, ಕೆ. ನಿರಂಜನ್, ಮದಕರಿ ಮತ್ತಿತರರು ಭಾಗವಹಿಸಿದ್ದರು.

ಜಿಗಳಿ ಮತ್ತು ಯಲವಟ್ಟಿ ಭಜನಾ ಸಂಘದವರು ಭಜನೆ ಹಾಡುಗಳನ್ನು ಹಾಡಿದರು. ಕುಂಬಳೂರಿನ ಕೆ. ಕುಬೇರಪ್ಪ ಭಕ್ತಿಗೀತೆ ಹಾಡಿದರು. ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು.

# ರೈಲ್ವೆ ಖಾಸಗೀಕರಣ ಪ್ರಶ್ನೆಯೇ ಇಲ್ಲ : ಸಚಿವ ಅಶ್ವಿನಿ ವೈಷ್ಣವ್

ನಾಸಿಕ್,ಅ.4-ರೈಲ್ವೆ ಖಾಸಗಿಕರಣಗೊಳಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಎಲ್ಲರ ಕೈಗೆಟಕುವ ದರದಲ್ಲಿ ಸೇವೆ ಒದಗಿಸಲು ರೈಲ್ವೆ ಉದ್ದೇಶಿಸಿದೆ ಎಂದು ತಿಳಿಸಿದ್ದಾರೆ.

400 ರೂ. ಗಳಿಗೂ ಕಡಿಮೆ ವೆಚ್ಚದಲ್ಲಿ ಸಾವಿರ ಕಿಲೋಮೀಟರ್‌ವರೆಗೆ ಪ್ರಯಾಣ ಮಾಡಲು ಸಾಧ್ಯವಿರಬೇಕು ಎಂಬುದು ತಮ್ಮ ಗುರಿಯಾಗಿದೆ ಎಂದು ರೈಲ್ವೆ ಸಚಿವರು ತಿಳಿಸಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ರೈಲ್ವೆ ಸಂಪೂರ್ಣ ಬದಲಾಗಲಿದೆ. ವಂದೇ ಭಾರತ್ ಹಾಗೂ ನಮೋ ಭಾರತ್ ರೀತಿಯ ರೈಲುಗಳು ಹೆಚ್ಚಾಗಲಿವೆ. ರೈಲ್ವೆ ಸುರಕ್ಷತೆಗಾಗಿ ಕವಚ್ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದು ಸಚಿವರು ಹೇಳಿದ್ದಾರೆ.

ರೈಲ್ವೆ ಹಾಗೂ ರಕ್ಷಣೆ ದೇಶದ ಎರಡು ಬೆನ್ನೆಲುಬು. ರೈಲ್ವೆ ಖಾಸಗೀಕರಣಗೊಳಿಸುವ ಪ್ರಶ್ನೆಯೇ ಇಲ್ಲ. ಇಂತಹ ವಿಷಯದಲ್ಲಿ ರಾಜಕೀಯ ಮಾಡಬಾರದು ಎಂದು ಸಚಿವರು ಹೇಳಿದ್ದಾರೆ.

# ವಿಜಯ್ ತಾತಾನಿಂದ ಮೋಸ : ಎಸ್.ಐ.ಟಿ. ರಚನೆಗೆ ಆಗ್ರಹ

ಬೆಂಗಳೂರು, ಅ. 4 - ವಂಚಕ ವಿಜಯ್ ತಾತಾನಿಂದ ಮೋಸ ಹೋದ ಅನೇಕರಿಗೆ ನ್ಯಾಯ ಕೊಡಿಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಬೇಕು ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಹೆಚ್.ಎಂ.ರಮೇಶ್ ಗೌಡ ಇಂದಿಲ್ಲಿ ಒತ್ತಾಯಿಸಿದ್ದಾರೆ.

ಸಂಸದ ಮಲ್ಲೇಶ್ ಬಾಬು, ವಿಧಾನ ಪರಿಷತ್ ಸದಸ್ಯರಾದ ಕೆ.ಎನ್.ತಿಪ್ಪೇಸ್ವಾಮಿ, ಟಿ.ಎ.ಶರವಣ, ಜವರಾಯಿಗೌಡ ಹಾಗೂ ವಿವಿಧ ಮುಖಂಡರೊಂದಿಗೆ ಜಂಟೀ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನೇಕರಿಗೆ ವಿಜಯ್ ತಾತಾ ಮೋಸ ಮಾಡಿದ್ದಾನೆ, ಆತನ ವಿರುದ್ಧ ನೂರಾರು ಪ್ರಕರಣಗಳು ದಾಖಲಾಗಿವೆ, ವಂಚನೆಯೇ ಆತನ ಪ್ರವೃತ್ತಿ ಎಂದರು.

ರಾಜ್ಯದ ಆಂತರಿಕ ಭದ್ರತಾ ವಿಭಾಗದಿಂದ ನನ್ನ ಫೋನ್ ಕದ್ದಾಲಿಕೆ ಆಗುತ್ತಿದೆ, ಪೊಲೀಸ್ ಆಯುಕ್ತರಿಗೆ ದೂರು ನೀಡುತ್ತೇನೆ, ಈ ಬಗ್ಗೆಯೂ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು.

ಕುಮಾರಸ್ವಾಮಿ ಹಾಗೂ ನನ್ನ ಮೇಲೆ ವಿಜಯ್ ತಾತಾ ಪೊಲೀಸರಿಗೆ ದೂರು ನೀಡಿದ್ದರು. ನಾನು ಆತನ ವಿರುದ್ಧ ದೂರು ಕೊಡಲು ಹೋದಾಗ ವಿಜಯ್ ತಾತಾ ಠಾಣೆಯಲ್ಲೇ ಇದ್ದರು. ಆಗ ಯಾಕೆ ಸುಳ್ಳು ದೂರು ಕೊಡುತ್ತೀಯಾ, ಇದು ಸರೀನಾ ಎಂದು ಇನ್ಸ್‌ಪೆಕ್ಟರ್ ಮುಂದೆಯೇ ಕೇಳಿದೆ. ಅದಕ್ಕೆ ವಿಜಯ್ ತಾತಾ, "ಮುಖ್ಯಮಂತ್ರಿ ಕಚೇರಿ ಹಾಗೂ ಕೆಲವು ಸಚಿವರಿಂದ ನನ್ನ ಮೇಲೆ ಒತ್ತಡ ಇದೆ" ಎಂದರು.

ವಿಜಯ್ ತಾತಾ ವಿರುದ್ಧ ಕರ್ನಾಟಕ ಮಾತ್ರವಲ್ಲ, ನಾಗಪುರ, ಪುಣೆ, ಮುಂಬೈನಲ್ಲೂ ಪ್ರಕರಣಗಳು ದಾಖಲಾಗಿವೆ. ನೂರಾರು ಎಫ್‌ಐಆರ್‌ಗಳು ಆಗಿವೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ನನ್ನ ಬಳಿ ಇವೆ.

ವಿಜಯ್ ತಾತಾ ಹಲವು ಬಾರಿ ನನಗೆ ದೂರ ವಾಣಿ ಕರೆ ಮಾಡಿದ್ದ, ಮೆಸೇಜ್ ಕಳುಹಿಸಿದ್ದ, 2006-07 ಹಾಗೂ 2008ರಲ್ಲಿ ಯೂರೋಪಿಯನ್ ಟೌನ್‌ಶಿಪ್ ಮಾಡಿ ಲೇಔಟ್ ಮಾಡುತ್ತೇನೆ ಅಂತಾ ಹೇಳಿದ್ದರು, ಲೇಔಟ್‌ಗೆ ಇವನ ಬಳಿ ಜಮೀನು ಇಲ್ಲ ಎಂದು ಬಿಡಿಎ ಬಣ್ಣ ಬಯಲು ಮಾಡಿತ್ತು ಎಂದು ಹೇಳಿದರು.

ದೇವನಹಳ್ಳಿ ಬಳಿ ಅಪಾರ್ಟ್‌ಮೆಂಟ್ ಕಟ್ಟುತ್ತೇನೆ, ಮನೆ ತೆಗೆದುಕೊಂಡರೆ ಬೆನ್ಜ್ ಕಾರು ಕೊಡುತ್ತೇನೆ ಎಂದು ಜಾಹೀರಾತು ನೀಡಿದ್ದ. ಒಂದು ಜಮೀನನ್ನು ಮೂವರಿಗೆ ಮಾರಾಟ ಮಾಡಿದ್ದಾನೆ. ಸೋಫಾ ಶೋ ರೂಮ್ ವ್ಯವಹಾರದಲ್ಲೂ ಹಲವು ಜನರಿಗೆ ಮೋಸ ಮಾಡಿದ್ದಾನೆ ಎಂದು ಆರೋಪಿಸಿದರು.

ನಾನು ದೂರು ಕೊಟ್ಟರೆ ಎಫ್‌ಐಆರ್ ಆಗಲ್ಲ, ಆತ ದೂರು ಕೊಟ್ಟರೆ ಆಗುತ್ತದೆ. ಪೊಲೀಸ್ ಠಾಣೆ ಮುಂದೆ ಧರಣಿ ಕೂರುತ್ತೇನೆ. ನಾಳೆಯಿಂದ ಎಲ್ಲಾ ಸಚಿವರ ಮೇಲೆ ದೂರು ಕೊಟ್ಟರೆ ಎಫ್‌ಐಆರ್ ಹಾಕುತ್ತಾರಾ? ಎಂದು ಪ್ರಶ್ನಿಸಿದರು.

ಪೊಲೀಸ್ ಇಲಾಖೆ ಸಹಜ ನ್ಯಾಯ ಪಾಲನೆ ಮಾಡುತ್ತಿಲ್ಲ, ಒತ್ತಡಕ್ಕೆ ಮಣಿದು ಕೆಲಸ ಮಾಡುತ್ತಿದೆ. ವಿಜಯ್ ತಾತಾ ವಿರುದ್ಧ ದೂರು ಕೊಟ್ಟರೂ ಎಫ್‌ಐಆರ್ ದಾಖಲಿಸದ ಪೊಲೀಸರ ಕ್ರಮ ಖಂಡನೀಯ ಎಂದು ರಮೇಶ್ ಗೌಡ ಮತ್ತಿತರೆ ಮುಖಂಡರು ನಗರ ಪೊಲೀಸ್ ಆಯುಕ್ತರ ಕಚೇರಿ ಎದುರು ಧರಣಿ ನಡೆಸಿದರು.

# ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜುಗಳಿಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು, ಅ. 4 - ನಗರದ ಮೂರು ಇಂಜಿನಿಯರಿಂಗ್ ಕಾಲೇಜುಗಳಿಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಲಾಗಿದೆ. ನಂತರ ಈ ಬೆದರಿಕೆ ಹುಸಿ ಎಂಬುದು ಪತ್ತೆಯಾಗಿದೆ. ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಿ.ಎಂ.ಎಸ್. ಕಾಲೇಜು ಹಾಗೂ ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜುಗಳಿಗೆ ಮಧ್ಯಾಹ್ನ 1 ಗಂಟೆಗೆ ಬಾಂಬ್ ಬೆದರಿಕೆ ಒಡ್ಡಲಾಗಿತ್ತು.

ಕಾಲೇಜು ಆಡಳಿತ ಮಂಡಳಿಗಳು ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದವು. ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳಗಳ ಮೂಲಕ ಪರಿಶೀಲನೆ ನಡೆಸಲಾಯಿತು. ನಂತರ ಇದು ಹುಸಿ ಬೆದರಿಕೆ ಎಂಬುದು ಪತ್ತೆಯಾಯಿತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.

# ಸಾಂಸ್ಕೃತಿಕ, ಅಧ್ಯಾತ್ಮದ ಮಹತ್ವ ಸಾರುವ ದಸರಾ

ದಾವಣಗೆರೆ, ಅ.4- ವಿಶ್ವ ಹಿಂದೂ ಪರಿಷದ್ ಹಾಗೂ ಸಾರ್ವಜನಿಕ ವಿಜಯದಶಮಿ ಮಹೋತ್ಸವ ಸಮಿತಿಯಿಂದ ನಗರದ ಪಿ.ಬಿ. ರಸ್ತೆಯ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ದುರ್ಗಾ ದೇವಿಯ ವಿಗ್ರಹ, ಘಟ ಸ್ಥಾಪನೆ ನೆರವೇರಿತು.

ನಿಟ್ಟುವಳ್ಳಿಯ ದುರ್ಗಾಂಬಿಕಾ ದೇವಿ ದೇವಸ್ಥಾನದಿಂದ ಬೀರಲಿಂಗೇಶ್ವರ ದೇವಸ್ಥಾನದ ಆವರಣದವರೆಗೆ ದೇವಿಯ ವಿಗ್ರಹವನ್ನು ಮೆರವಣಿಗೆಯೊಂದಿಗೆ ತರಲಾಯಿತು. ಹಿಂದೂ ಸಮಾಜದ ಹಿರಿಯರು ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡಿದರು.

ಮೆರವಣಿಗೆಯು ನಗರದ ರಾಜ ಬೀದಿಗಳಲ್ಲಿ ಸಾಗಿ ಬೀರಲಿಂಗೇಶ್ವರ ಆವರಣ ತಲುಪಿತು. ಮಂಗಳವಾದ್ಯಗಳು, ಗಜರಾಜನ ಗಾಂಭೀರ್ಯ ನಡಿಗೆ ಹಾಗೂ ನಾಸಿಕ್ ಡೋಲಿನ ಕಲಾ ತಂಡಗಳು ಮೆರವಣಿಗೆಯಲ್ಲಿ ಕಂಡು ಬಂದವು.

ಈ ವೇಳೆ ಆಶೀರ್ವಚನ ನೀಡಿದ ಜಡೆಸಿದ್ದೇಶ್ವರ ಸ್ವಾಮೀಜಿ ಅವರು, ನವರಾತ್ರಿಯ ಈ ದಿನಗಳಲ್ಲಿ ಶ್ರೀ ದೇವಿಯನ್ನು ಭಕ್ತಿಯಿಂದ ಪ್ರಾರ್ಥಿಸುವವರಿಗೆ ದೇವಿಯ ಅನುಗ್ರಹ ಪ್ರಾಪ್ತಿಯಾಗಲಿದೆ ಎಂದು ಹೇಳಿದರು.

ದಸರಾ ಮಹೋತ್ಸವವು ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಮಹತ್ವವನ್ನು ಹೊಂದಿದೆ ಎಂದ ಅವರು, ದೇವತೆಗೆ ಹತ್ತು ಹಲವು ರೂಪಗಳಿದ್ದು, ಶಕ್ತಿ ಮಾತ್ರ ಒಂದೆಯಾಗಿದೆ. ಹಾಗಾಗಿ ಎಲ್ಲರೂ ಭಕ್ತಿಯಿಂದ ದೇವಿಯ ಕೃಪೆಗೆ ಪಾತ್ರರಾಗಿ ಎಂದರು.

ಈ ವೇಳೆ ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ಸಮಿತಿ ಸಂಚಾಲಕ ಕೆ.ಆರ್. ಮಲ್ಲಿಕಾರ್ಜುನ್, ವಿನಾಯಕ್ ರಾನಡೆ, ರಾಕೇಶ್ ಜಾಧವ್, ಕೆಇಬಿ ಶೇಖರ್, ಹೆಚ್.ಎಸ್. ಸುರೇಶ್, ಕೆ.ಬಿ. ಗುರುಶಾಂತ್ ಮತ್ತಿತರರಿದ್ದರು.

# ಮೀಸಲಾತಿ ಶೇ.75ಕ್ಕೆ ಹೆಚ್ಚಿಸುವ ಬೇಡಿಕೆ ಬೌದ್ಧಿಕ ದಿವಾಳಿತನ : ಪ್ರಕಾಶ್ ಅಂಬೇಡ್ಕರ್

ಮುಂಬೈ, ಅ. 4 - ಮಹಾರಾಷ್ಟ್ರದಲ್ಲಿ ಮೀಸಲಾತಿಯನ್ನು ಶೇ. 75ಕ್ಕೆ ಹೆಚ್ಚಿಸಬೇಕು ಎಂಬ ಬೇಡಿಕೆಯನ್ನು ವಂಚಿತ ಬಹುಜನ ಅಗಾಡಿ ಪಕ್ಷದ ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಟೀಕಿಸಿದ್ದಾರೆ.

ಎನ್‌ಸಿಪಿ (ಎಸ್‌ಪಿ) ಅಧ್ಯಕ್ಷ ಶರದ್ ಪವಾರ್ ಅವರು ಮೀಸಲಾತಿ ಮಿತಿಯನ್ನು ಶೇ.75ಕ್ಕೆ ಹೆಚ್ಚಿಸಬೇಕು ಎಂದು ಹೇಳಿರುವುದು ಅವರ ಬೌದ್ಧಿಕ ದಿವಾಳಿತನ ತೋರಿಸುತ್ತದೆ ಎಂದು ಪ್ರಕಾಶ್ ಅಂಬೇಡ್ಕರ್ ಹೇಳಿದ್ದಾರೆ.

ಮೀಸಲಾತಿ ಎಂಬುದು ಅಭಿವೃದ್ಧಿಗೆ ಸಂಬಂಧಿಸಿದ ವಿಷಯವಲ್ಲ. ಇದು ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ ಎಂದು ಅಂಬೇಡ್ಕರ್ ತಿಳಿಸಿದ್ದಾರೆ.

ತಮಿಳುನಾಡಿನಲ್ಲಿ ಶೇಕಡಾ 78 ರಷ್ಟು ಮೀಸಲಾತಿ ಇದೆ. ಮಹಾರಾಷ್ಟ್ರದಲ್ಲಿ ಏಕೆ ಶೇಕಡಾ 75 ರಷ್ಟು ಮೀಸಲಾತಿ ಇರಬಾರದು? ಎಂದು ಪವಾರ್ ಪ್ರಶ್ನಿಸಿದ್ದರು. ರಾಜ್ಯದ ಹಲವಾರು ಸಮುದಾಯಗಳು ಮೀಸಲಾತಿಗೆ ಬೇಡಿಕೆ ಮುಂದಿಟ್ಟಿರುವ ಹಿನ್ನೆಲೆಯಲ್ಲಿ ಪವಾರ್ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

# ಮಕ್ಕಳಲ್ಲಿ ಕಲಾಭಿರುಚಿ ಬೆಳೆಸಲು ಕಲಾ ಪ್ರದರ್ಶನ ಸಹಕಾರಿ

## ಅರವತ್ತು ವರ್ಷಗಳ ಕಲಾ ಪಯಣ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್

ದಾವಣಗೆರೆ, ಅ.4- ಮಕ್ಕಳಲ್ಲಿ ಕಲಾಭಿರುಚಿ ಬೆಳೆಸಲು ನಗರದ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಮಕ್ಕಳು ದೃಶ್ಯಕಲಾ ವಿವಿಯಲ್ಲಿ ನಡೆಯುವ ಕಲಾ ಪ್ರದರ್ಶನ ವೀಕ್ಷಿಸಬೇಕಿದೆ ಎಂದು ದಾವಣಗೆರೆ ವಿವಿಯ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಹೇಳಿದರು.

ನಗರದ ದೃಶ್ಯಕಲಾ ಮಹಾವಿದ್ಯಾಲಯದ ವಜ್ರ ಮಹೋತ್ಸವದ ಅಂಗವಾಗಿ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅರವತ್ತು ವರ್ಷಗಳ ಕಲಾ ಪಯಣ, ಅನ್ವೇಷಣೆಯ ಪಥದಲ್ಲಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದ ಕಲಾವಿದರನ್ನು ಕಾಲೇಜಿಗೆ ಕರೆಸಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಇದಕ್ಕೆ ಹಿರಿಯ ಪ್ರಾಧ್ಯಾಪಕರು ಹಾಗೂ ದಾವಣಗೆರೆ ವಿವಿಯ ಸಹಕಾರ ಇರಲಿದೆ ಎಂದು ತಿಳಿಸಿದರು.

ಕಳೆದ 60 ವರ್ಷಗಳಲ್ಲಿ ಸಾಧಿಸಲಾಗದ ಸಾಧನೆಯನ್ನು 60ನೇ ವರ್ಷದಲ್ಲಿ ಮಾಡಬೇಕು. ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ಅತ್ಯುತ್ತಮ ಕಾರ್ಯಕ್ರಮಗಳನ್ನು ಆಯೋಜಿಸಿ ಕಾಲೇಜಿನ ಕೀರ್ತಿ ಹೆಚ್ಚಿಸಬೇಕು ಎಂದು ಹೇಳಿದರು.



ಹಿರಿಯ ಚಿತ್ರಕಲಾವಿದ ಶ್ರೀನಾಥ್ ಬಿದರೆ ಅವರು, ತಮ್ಮ ತಂದೆ ಬಿದರೆ ನಾರಾಯಣ ಅವರ ಹೆಸರಿನಲ್ಲಿ 'ಶ್ರೇಷ್ಠ ಕಲಾ ಪ್ರಶಸ್ತಿ' ನೀಡಿರುವುದು ಕಾಲೇಜಿಗೆ ಹರ್ಷ ತಂದಿದೆ ಎಂದು ಶ್ಲಾಘಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಮಾತನಾಡಿ, ದಾವಣಗೆರೆ ವಿವಿ ಹಾಗೂ ದೃಶ್ಯ ಕಲಾ ಕಾಲೇಜಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಹಕಾರ ನೀಡಲಿದೆ ಎಂದರು.

ಹಿರಿಯ ಕಲಾವಿದ ಮಹಾಲಿಂಗಪ್ಪ ಮಾತನಾಡಿ, ದೃಶ್ಯ ಕಲಾ ಕಾಲೇಜು ದೇವನಗರಿಯಲ್ಲೇ ಜನ್ಮ ತಾಳಲು ಶ್ರಮಿಸಿದ ಡಾ. ಮಿಣಜಗಿ ಅವರ ಹೆಸರನ್ನು ಯಾರು ಮರೆಯಬಾರದು. ಹಾಗಾಗಿ ಅವರಿಗೆ ಗೌರವ ಸಮರ್ಪಣೆ ಸಲ್ಲಿಸುವ ನಿಟ್ಟಿನಲ್ಲಿ ಅವರ ಹೆಸರಿನಲ್ಲಿ ಕಾರ್ಯಕ್ರಮ ಮಾಡಬೇಕಿದೆ ಎಂದು ಹೇಳಿದರು.

ಕಲಾ ಶಾಲೆಯ ಚಟುವಟಿಕೆಗಳನ್ನು ಸಾರ್ವಜನಿಕರು ವೀಕ್ಷಿಸಬೇಕು ಮತ್ತು ನಗರದ ವಿವಿಧೆಡೆ ಕಲಾ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಮನವಿ ಮಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ. ಜೈರಾಜ್ ಚಿಕ್ಕಪಾಟೀಲ್ ಪ್ರಾಸ್ತಾವಿಕ ಮಾತನಾಡಿದರು. ಹಿರಿಯ ಕಲಾವಿದ ಶ್ರೀನಾಥ್ ಸ್ವಾಗತಿಸಿದರು.

ಈ ವೇಳೆ ಲಲಿತ ಕಲಾ ಅಕಾಡೆಮಿಯ ಆಶಾರಾಣಿ ನಡೋಣಿ, ಮೈಸೂರು ಕಲಾನಿಕೇತನ ಕಲಾ ಶಾಲೆಯ ಡಾ. ವಿಠ್ಠಲ ರೆಡ್ಡಿ ಎಫ್. ಚುಳಕಿ, ಕಲಾವಿದರಾದ ಪಿ. ಅಬೂಬಕರ್, ಡಿ. ಕುಬೇರಪ್ಪ ಮತ್ತು ಇತರರಿದ್ದರು.

# ಇಂಧನ ಮಾಲಿನ್ಯ ಹೆಚ್ಚಿಸುತ್ತಿರುವ ಎ.ಐ.

## ಪ್ರತಿ 100 ದಿನಗಳಿಗೊಮ್ಮೆ ಎ.ಐ. ಬಳಸುವ ವಿದ್ಯುತ್ ಪ್ರಮಾಣ ದುಪ್ಪಟ್ಟು ಏರಿಕೆ

ನವದೆಹಲಿ, ಸೆ. 3 - ಕೃತಕ ಬುದ್ಧಿವಂತಿಕೆ ನಮ್ಮ ಪ್ರತಿನಿತ್ಯದ ಕೆಲಸಗಳನ್ನು ಈಗ ಸಲೀಸಾಗಿಸುತ್ತಿದೆ. ಆದರೆ, ಇದೇ ವೇಳೆ ಪಳೆಯುಳಿಕೆ ಇಂಧನ ವಲಯಕ್ಕೆ ಮರು ಜೀವ ನೀಡುವ ಮೂಲಕ ಪರಿಸರಕ್ಕೆ ಹೊಸ ಸಮಸ್ಯೆ ತರುತ್ತಿದೆ.

2020ರ ನಂತರ ಮೈಕ್ರೋಸಾಫ್ಟ್, ಗೂಗಲ್ ಹಾಗೂ ಮೆಟಾ ರೀತಿಯ ದೈತ್ಯ ಟೆಕ್ ಕಂಪನಿಗಳು ಹಸಿರು ಮನೆ ಮಾಲಿನ್ಯಕ್ಕೆ ಕಾರಣವಾಗುವ ಅನಿಲ ಹೆಚ್ಚಳಕ್ಕೆ ಇನ್ನಷ್ಟು ಕಾರಣವಾಗುತ್ತಿವೆ. ಎ.ಐ. ಪ್ರೋಗ್ರಾಂಗಳನ್ನು ನಿರ್ವಹಿಸುವ ಡಾಟಾ ಕೇಂದ್ರಗಳು ಹಗಲೂ ರಾತ್ರಿ ಸರ್ವರ್‌ಗಳನ್ನು ಉರಿಸುತ್ತಿವೆ. ಈ ಸರ್ವರ್‌ಗಳಿಗೆ ಅಗಾಧ ವಿದ್ಯುತ್ ಅಗತ್ಯವಿದೆ.

ಎ.ಐ. ಮಾದರಿಗಳಿಗೆ ಸಾಕಷ್ಟು ವಿದ್ಯುತ್ ಅಗತ್ಯವಿದೆ. ಪ್ರತಿ 100 ದಿನಗಳಿಗೆ ಎ.ಐ. ಬಳಸುವ ವಿದ್ಯುತ್ ಪ್ರಮಾಣ ಎರಡು ಪಟ್ಟು ಹೆಚ್ಚಾಗುತ್ತಿದೆ ಎಂದು ವಿಶ್ವ ಆರ್ಥಿಕ ವೇದಿಕೆ ತಿಳಿಸಿದೆ. ಇದರಿಂದಾಗಿ ಅಮೆರಿಕದಲ್ಲಿ ಮುಚ್ಚುವ ಹಂತದಲ್ಲಿದ್ದ ಪಳೆಯುಳಿಕೆ ಇಂಧನ ಆಧರಿತ ವಿದ್ಯುತ್ ಘಟಕಗಳು ಮತ್ತೆ ಜೀವ ಪಡೆದುಕೊಳ್ಳುತ್ತಿವೆ.

ಎ.ಐ. ಈಗ ಪ್ರತಿನಿತ್ಯ ಬಳಕೆಯಾಗುವ ಸಾಧನವಾಗಿದೆ. ಎ.ಐ. ಸಾಮಾನ್ಯ ಕೋಡಿಂಗ್‌ಗಿಂತ ಭಿನ್ನವಾಗಿದೆ. ಸಾಂಪ್ರದಾಯಿಕ ಕೋಡಿಂಗ್‌ನಲ್ಲಿ ಒಮ್ಮೆ ಕೋಡ್ ರೂಪಿಸಿದ್ದರೆ ಸಾಕಿತ್ತು. ಆದರೆ, ಎ.ಐ. ನಿರಂತರವಾಗಿ ಬಳಕೆದಾರರ ಅಭಿರುಚಿ ಅರಿತು ಅದಕ್ಕೆ ತಕ್ಕ ಹಾಗೆ ಕಾರ್ಯನಿರ್ವಹಿಸುತ್ತದೆ. ಹೀಗಾಗಿ ಹೆಚ್ಚಿನ ವಿದ್ಯುತ್ ಬಳಸುತ್ತದೆ ಎಂದು ಯೂನಿವರ್ಸಿಟಿ ಆಫ್ ಸಿಡ್ನಿಯ ಕಂಪ್ಯೂಟಿಂಗ್ ಪರಿಣಿತರಾದ ಸಾಂಡ್ರಾ ಪೀಟರ್ ಹಾಗೂ ಕೇ ರೀಮರ್ ಹೇಳಿದ್ದಾರೆ.



ಎ.ಐ. ಪ್ರೋಗ್ರಾಂಗಳಿಗೆ ತರಬೇತಿ ಹಾಗೂ ನಿರಂತರವಾಗಿ ಭಾರೀ ಪ್ರಮಾಣದ ಮಾಹಿತಿಯನ್ನು ನೀಡಲಾಗುತ್ತದೆ. ಎ.ಐ.ದ ಡಾಟಾ ಪ್ರೊಸೆಸರ್‌ಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತವೆ. ಹೀಗಾಗಿ ಸಾಮಾನ್ಯ ಸಾಫ್ಟ್‌ವೇರ್‌ಗಿಂತ ಎ.ಐ. ತಂತ್ರಾಂಶ 33 ಪಟ್ಟು ಹೆಚ್ಚು ಇಂಧನ ಬಳಸುತ್ತದೆ.

ಎ.ಐ. ಆಧರಿತ ಚಾಟ್‌ಬಾಟ್‌ಗೆ ಒಂದು ಸಾಮಾನ್ಯ ಪ್ರಶ್ನೆ ಕೇಳಿದಾಗಲೂ, ಅದು ಸಾಮಾನ್ಯ ಗೂಗಲ್ ಸರ್ಚ್‌ಗಿಂತ ಹತ್ತು ಪಟ್ಟು ಹೆಚ್ಚು ಇಂಧನ ಬಳಸುತ್ತದೆ ಎಂದು ಸಿಡ್ನಿಯ ಯೂನಿವರ್ಸಿಟಿ ಆಫ್ ಟೆಕ್ನಾಲಜಿಯ ಸಂಶೋಧಕರಾದ ಗೊರ್ಡನ್ ನೊಬಲ್ ಹಾಗೂ ಫಿಯೊನಾ ಬೆರ್ರಿ ಹೇಳಿದ್ದಾರೆ.

ಅಪಾರ ಇಂಧನ ಬೇಡಿಕೆಯಿಂದಾಗಿ ಇಂಗಾಲ ತ್ಯಾಜ್ಯ ಹಾಗೂ ನೀರಿನ ಮಾಲಿನ್ಯ ಹೆಚ್ಚಾಗುತ್ತಿದೆ. ಇದು ಎಲೆಕ್ಟ್ರಿಕ್ ಗ್ರಿಡ್‌ಗಳ ಮೇಲಿನ ಒತ್ತಡ ಇನ್ನಷ್ಟು ಹೆಚ್ಚಿಸಲಿದೆ. ಈಗಾಗಲೇ ಪರಿಸರ ಬದಲಾವಣೆಯ ಸಮಸ್ಯೆ ಇನ್ನಷ್ಟು ಹೆಚ್ಚಾಗಲಿದೆ ಎಂದವರು ಹೇಳಿದ್ದಾರೆ.

ಇದರ ಜೊತೆಗೆ ಡಾಟಾ ಸೆಂಟರ್‌ಗಳಲ್ಲಿ ತಾಪಮಾನ ಹೆಚ್ಚಾಗುವ ಕಾರಣದಿಂದ, ಅವುಗಳನ್ನು ತಂಪಾಗಿರಿಸಲು ಸಾಕಷ್ಟು ನೀರು ಬಳಸಲಾಗುತ್ತದೆ. ಬಿಸಿಗಾಳಿಯ ವಾತಾವರಣ ಇಲ್ಲವೇ ಬರದ ಪರಿಸ್ಥಿತಿಯಲ್ಲಿ ಈ ಸಮಸ್ಯೆ ಇನ್ನಷ್ಟು ಉಲ್ಬಣಿಸುತ್ತದೆ.

**ಪ್ರಯೋಜನವೂ ಉಂಟು :** ಡಾಟಾ ಸೆಂಟರ್‌ಗಳಿಂದ ಪರಿಸರದ ಮೇಲೆ ಆಗುವ ಪರಿಣಾಮದ ಪೂರ್ಣ ಚಿತ್ರಣ ದೊರೆತಿಲ್ಲ. ಇದರ ನಡುವೆ, ಎ.ಐ. ಕಾರಣದಿಂದ ನಮ್ಮ ಪರಿಸರದ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ವಾದ ಮುಂದಿಡುವವರೂ ಇದ್ದಾರೆ.

ಎ.ಐ. ಸಾಮರ್ಥ್ಯದಿಂದಾಗಿ ಪ್ರವಾಹ ಹಾಗೂ ಪರಿಸರ ಬದಲಾವಣೆ ಕುರಿತ ಸ್ಪಷ್ಟ ಚಿತ್ರಣ ಸಿಗುತ್ತದೆ. ಹಿಮಪರ್ವತಗಳಲ್ಲಿ ಆಗುವ ಬದಲಾವಣೆಯನ್ನು ಮನುಷ್ಯರಿಗಿಂತ ಎ.ಐ. ಹತ್ತು ಸಾವಿರ ಪಟ್ಟು ಹೆಚ್ಚು ನಿಖರವಾಗಿ ಗುರುತಿಸುತ್ತದೆ ಎಂದು ವೆಸ್ಟರ್ನ್ ಸಿಡ್ನಿ ಯುನಿವರ್ಸಿಟಿಯ ಎ.ಐ. ಪರಿಣಿತ ಎಹಸಾನ್ ನೊರೂಜಿನೆಜಾದ್ ಹಾಗೂ ಆಸ್ಟ್ರೇಲಿಯಾದ ಟಾರೆನ್ಸ್ ಯೂನಿವರ್ಸಿಟಿಯ ಸೈಯದಾಲಿ ಮಿರ್ಜಲೀಲ್ ಹೇಳಿದ್ದಾರೆ.

ಎ.ಐ. ಇಡೀ ವಿದ್ಯುತ್ ಗ್ರಿಡ್ ಮೇಲೆ ನಿಕಟವಾಗಿ ನಿಗಾ ವಹಿಸುತ್ತದೆ ಹಾಗೂ ಜನರೇಟರ್‌ಗಳ ನಡುವೆ ಹೆಚ್ಚಿನ ಸಮನ್ವಯತೆ ತರುತ್ತದೆ. ಇದರಿಂದಾಗಿ ವಿದ್ಯುತ್ ಪೋಲಾಗುವುದು ಕಡಿಮೆಯಾಗುತ್ತದೆ. ಮರು ಬಳಕೆ ಘಟಕಗಳಲ್ಲಿ ತ್ಯಾಜ್ಯ ವಸ್ತುಗಳ ವಿಂಗಡಣೆ ಹಾಗೂ ವಾಯು ಮಾಲಿನ್ಯದ ಮೂಲ ಪತ್ತೆ ಇತ್ಯಾದಿ ವಲಯಗಳಲ್ಲೂ ಎ.ಐ. ನೆರವಾಗುತ್ತದೆ. ಹೊಲಗಳಲ್ಲಿ ಮಣ್ಣಿನ ಗುಣಮಟ್ಟ ಹಾಗೂ ವಾತಾವರಣ ಮತ್ತು ನೀರಿನ ಅಗತ್ಯಗಳನ್ನು ಎ.ಐ. ನಿಖರವಾಗಿ ಪತ್ತೆ ಮಾಡುತ್ತದೆ. ಇದೆಲ್ಲವೂ ಪರಿಸರ ಸಂರಕ್ಷಣೆಗೆ ನೆರವಾಗುತ್ತದೆ ಎಂಬ ವಾದವಿದೆ.

**ತ್ಯಾಜ್ಯ ಹೆಚ್ಚಿಸಲಿರುವ ಉತ್ಪಾದನೆ :** ಆದರೆ, ಒಂದೆಡೆ ಅನ್ವೇಷಣೆಗಳ ಕಾರಣ ದಿಂದ ವಿದ್ಯುತ್ ಉಳಿತಾಯವಾಗುತ್ತಿದ್ದರೆ, ಮತ್ತೊಂದೆಡೆ ಮನುಷ್ಯನ ಚಟುವಟಿಕೆ ಹೊಸ ವಲಯಗಳಿಗೆ ಹರಡುತ್ತದೆ. ಇದು ಇಂಧನದ ಮೇಲಿನ ಒತ್ತಡ ಹೆಚ್ಚಿಸುತ್ತದೆ ಎಂಬುದು ಹಿಂದಿನ ವೈಜ್ಞಾನಿಕ ಬೆಳವಣಿಗೆಗಳಿಂದ ಕಂಡು ಬಂದಿದೆ.

ಎ.ಐ. ಕಾರಣಗಳಿಂದ ವಸ್ತುಗಳ ಬೇಡಿಕೆ ಹೆಚ್ಚಾಗಬಹುದು. ಇದರಿಂದ ಇನ್ನಷ್ಟು ಉತ್ಪಾದನೆಗೆ ಒತ್ತು ಸಿಗಲಿದೆ. ಇದು ಒಟ್ಟಾರೆ ಪರಿಸರ ತ್ಯಾಜ್ಯ ಹೆಚ್ಚಿಸಲಿದೆ. ಸಾಮಾನ್ಯವಾಗಿ ಕಡಿಮೆ ತಂತ್ರಜ್ಞಾನದ ಪರಿಹಾರಗಳೇ, ಜನರಿಗೆ ಹೆಚ್ಚು ನೆರವಾಗುತ್ತವೆ. ಹೀಗಾಗಿ ತಂತ್ರಜ್ಞಾನ ಬಳಕೆಯ ವಿಷಯದಲ್ಲಿ ಪರಿಸರ ಪರಿಣಾಮಗಳನ್ನು ಪರಿಗಣಿಸಲೇಬೇಕು ಎಂದು ಯೂನಿವರ್ಸಿಟಿ ಆಫ್ ಬ್ರಿಸ್ಟಲ್‌ನ ಇಂಜಿನಿಯರಿಂಗ್ ಪರಿಣಿತ ಕ್ರಿಸ್ ಮೆಗ್‌ಮೋಹನ್ ಹೇಳಿದ್ದಾರೆ.

# ಹರಿಹರ ತಾ. ಕೆಡಿಪಿ ಸಮಿತಿಗೆ ನೇಮಕ

ಮಲೇಬೆನ್ನೂರು, ಅ. 4- ಹರಿಹರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ (ಕೆಡಿಪಿ) ಸಮಿತಿಗೆ ಯಲವಟ್ಟಿಯ ಕೊಟ್ರೇಶ್ ನಾಯ್ಕ, ಕಮಲಾಪುರದ ಬಿ.ಬಿ. ಮಲ್ಲೇಶ್, ಗೋವಿನಹಾಳ್ ಕೆ.ಜಿ. ರಾಜು, ನಂದಿಗಾವಿಯ ನರೇಂದ್ರಕುಮಾರ್, ಭಾನುವಳ್ಳಿಯ ಜಬೀವುಲ್ಲಾ, ಕುಣೆಬೆಳಕೆರೆಯ ಶಿಲ್ಪಾ ಕುಬೇರಪ್ಪ ಅವರನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರ ಶಿಫಾರಸ್ಸಿನ ಮೇರೆಗೆ ಸರ್ಕಾರ ನೇಮಕ ಮಾಡಿ ಆದೇಶ ಹೊರಡಿಸಿದೆ.


**ಸರ್ವರಿಗೂ ಆದರದ ಸುಸ್ವಾಗತ**

**ದಾವಣಗೆರೆ ಮಹಾನಗರದ ಬೃಹತ್ ಶೋಭಾ ಯಾತ್ರೆಗೆ**
ಆಗಮಿಸುತ್ತಿರುವ ಎಲ್ಲಾ ಗಣ್ಯಾತಿಗಣ್ಯರಿಗೆ, ವಿವಿಧ ಪಕ್ಷಗಳ ನಾಯಕರಿಗೆ, ಸಹಸ್ರಾರು ಕಾರ್ಯಕರ್ತರಿಗೆ ಹಾಗೂ ಈ ಶೋಭಾ ಯಾತ್ರೆಗೆ ಪ್ರತ್ಯಕ್ಷ-ಪರೋಕ್ಷವಾಗಿ ಶ್ರಮಿಸಿದ ಪ್ರತಿಯೊಬ್ಬರಿಗೂ
ಸ್ವಾಗತ ಸುಸ್ವಾಗತ....



**ದಸ್ತಗೀರ್ ಎಸ್. ಅಸಾದುಲ್ಲಾ**
ಅಧ್ಯಕ್ಷರು, ಕನ್ನಡ ನಾಡು ಜನತಾ ಸಮಿತಿ, ದಾವಣಗೆರೆ.

## ರಾಜ್ಯ ರಾಜಕಾರಣಕ್ಕೆ ಬನ್ನಿ

**(1ನೇ ಪುಟದಿಂದ)** ಸಿಗುವುದೆಂಬ ವಿಶ್ವಾಸದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಜೊತೆ ಸಂಪರ್ಕದಲ್ಲಿದ್ದಾರೆ.

ಆಶ್ಚರ್ಯವೆಂದರೆ ಸಿದ್ದರಾಮಯ್ಯ ಬಣದವರೆಂದೇ ಗುರುತಿಸಿಕೊಂಡಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಸಚಿವರಲ್ಲಿ ಒಬ್ಬರಾದ ಜಾರಕಿಹೊಳಿ, ನಿನ್ನೆ ದಿಢೀರನೆ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ.

ನಿನ್ನೆ ರಾತ್ರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಮುಖಾಮುಖಿ ಚರ್ಚೆ ನಡೆಸಿದ ಸಚಿವರು, ಇಂದು ಬೆಳಿಗ್ಗೆ ಎಐಸಿಸಿ ಅಧ್ಯಕ್ಷ ಖರ್ಗೆ ಅವರ ಜೊತೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚಿಸಿದ್ದಾರೆ.

ಬಿಜೆಪಿ ದಾಳಕ್ಕೆ ಸಿದ್ದರಾಮಯ್ಯ ಅವರನ್ನು ಬಲಿ ಮಾಡುವುದು ಬೇಡ ಎಂದಿರುವ ಸತೀಶ್, ಒಂದು ವೇಳೆ ಕಾನೂನಿನ ಚೌಕಟ್ಟಿಗೆ ಸಿಲುಕಿದರೆ ಅಂತಹ ಸನ್ನಿವೇಶದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಅವಕಾಶ ಮಾಡಿ. ಇಂತಹ ಸಂದರ್ಭದಲ್ಲಿ ನೀವೇ ಕರ್ನಾಟಕ ರಾಜಕೀಯಕ್ಕೆ ಹಿಂತಿರುಗಿ ಮುಖ್ಯಮಂತ್ರಿ ಸ್ಥಾನ ವಹಿಸಿಕೊಳ್ಳಿ, ಇದರಿಂದ ಕಾಂಗ್ರೆಸ್‌ಗೆ ಮತ್ತಷ್ಟು ಬಲ ಬರಲಿದೆ, ಜೊತೆಗೆ ಪೂರ್ಣಾವಧಿ ಸರ್ಕಾರ ನೀಡಲು ಸಾಧ್ಯ ಎಂದು ಮನವಿ ಮಾಡಿಕೊಂಡಿದ್ದಾರೆ.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಸಿದ್ದರಾಮಯ್ಯ ಬಣಕ್ಕೆ ಇಷ್ಟವಿಲ್ಲ, ಹೀಗಾಗಿ ಎಐಸಿಸಿ ಅಧ್ಯಕ್ಷರಿಗೇ ಮೊರೆ ಹೋಗಿದ್ದಾರೆ. ಖರ್ಗೆ ನಾಯಕತ್ವ ವಹಿಸಿಕೊಳ್ಳುವುದಾದರೆ ಎಐಸಿಸಿ ಹಾಗೂ ರಾಜ್ಯದ ಯಾವುದೇ ಮುಖಂಡರಿಂದ ವಿರೋಧ ಇರುವುದಿಲ್ಲ.

ಇದನ್ನು ಮನಗಂಡು ಸಿದ್ದರಾಮಯ್ಯ ಬಣ ಪೂರ್ವ ಯೋಜಿತವಾಗಿ ಖರ್ಗೆ ಅವರನ್ನು ಮುಂದು ಮಾಡಲು ಹೊರಟಿದೆ.

ಸತೀಶ್, ದೆಹಲಿಯಲ್ಲಿ ಖರ್ಗೆ ಅವರನ್ನು ಭೇಟಿ ಮಾಡಿದ ಬೆನ್ನಲ್ಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಆಶ್ಚರ್ಯಕರ ಹೇಳಿಕೆ ನೀಡಿದ್ದಾರೆ. ಸಿದ್ದರಾಮಯ್ಯ ಇನ್ನೂ ರಾಜೀನಾಮೆ ನೀಡಿಯೇ ಇಲ್ಲ, ಆಗಲೇ ಮುಖ್ಯಮಂತ್ರಿ ಗಾದಿ ಬಗ್ಗೆ ಮಾತನಾಡುತ್ತಿದ್ದಾರೆ, ನಮ್ಮ ಪಕ್ಷದ 136 ಶಾಸಕರ ಇಚ್ಛೆಯ ಮೇರೆಗೆ ಮುಖ್ಯಮಂತ್ರಿ ಆಯ್ಕೆ ಆಗುತ್ತಾರೆ, ನಮ್ಮಲ್ಲಿ ವರಿಷ್ಠರ ತೀರ್ಮಾನವೇ ಅಂತಿಮ ಎಂದಿದ್ದಾರೆ.

## ನಗರದಲ್ಲಿ ನಾಳೆ ಬಹುಭಾಷಾ ಕವಿಗೋಷ್ಠಿ

ದಾವಣಗೆರೆ, ಅ. 4- ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ನಗರದ ಪಿ.ಜೆ ಬಡಾವಣೆಯ ವನಿತಾ ಸಮಾಜದಲ್ಲಿ ನಾಳಿದ್ದು ದಿನಾಂಕ 6ರ ಭಾನುವಾರ ಬೆಳಗ್ಗೆ 10.30ಕ್ಕೆ ದಸರಾ ಹಬ್ಬದ ಪ್ರಯುಕ್ತ ಬಹುಭಾಷಾ ಕವಿಗೋಷ್ಠಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 7019353970, 9916277224.

# ನವ ರಾತ್ರಿ ನವ ವರ್ಣ ನವ ದುರ್ಗೆ ವೈಶಿಷ್ಟ್ಯತೆ




ಹಿಂದೂ ಧರ್ಮದಲ್ಲಿ ನವರಾತ್ರಿ ಒಂದು ವಿಶೇಷವಾದ ಪವಿತ್ರವಾದ ದೊಡ್ಡ ಹಬ್ಬ. ನವರಾತ್ರಿಯಲ್ಲಿ ದುರ್ಗಾ ದೇವಿ ಒಂಭತ್ತು ದಿನಗಳು ಭುವಿಗೆ ಬಂದು ಭಕ್ತರನ್ನು ಅನುಗ್ರಹ ಮಾಡುತ್ತಾಳೆ ಎನ್ನುವ ನಂಬಿಕೆ ಇದೆ. ಈ ಒಂಭತ್ತು ದಿನಗಳು ವಿವಿಧ ರೂಪಗಳಿಂದ ದುರ್ಗೆಯನ್ನು ಪೂಜಿಸಲಾಗುತ್ತದೆ. ನವ ಬಣ್ಣಗಳ ವಸ್ತ್ರಗಳನ್ನು ತೊಡಿಸಿ ಅಲಂಕರಿಸಲಾಗುತ್ತದೆ. ಹೀಗೆ ನವರಾತ್ರಿಯಲ್ಲಿ ನವ ದುರ್ಗೆಯರನ್ನ ನವ ವರ್ಣದ ವಸ್ತ್ರಗಳಿಂದ ಅಲಂಕರಿಸಿ ಪೂಜಿಸುವುದರಿಂದ ಭಕ್ತರ ಇಷ್ಟಾರ್ಥ ಗಳು ಈಡೇರುತ್ತವೆ ಎಂದು ನಂಬಿಕೆ

**- ಮೊದಲ ದಿನ** ಶೈಲಾಪುತ್ರಿ ಇವಳು ಹಳದಿ ಬಣ್ಣ ಪ್ರಿಯಳು ಸಕಲ ದುರಿತಗಳ ಕಳೆಯುವಳು ಭಕ್ತಿಯಿಂದ ಪೂಜಿಸಲು ಒಲಿಯುವ ದೇವಿ

**- ಎರಡನೇ ದಿನ** ಬ್ರಹ್ಮಚಾರಿಣಿ ದೇವಿ ಬರುವಳು ಇವಳು ಹಸಿರು ವಸ್ತ್ರ ಧಾರಿಣಿ, ಶ್ವೇತ ವರ್ಣ ಪ್ರಿಯೆ. ಇವಳು ಭಕ್ತಿಯಲಿ ಆರಾಧಿಸಿದರೆ ಮನೆಯಲ್ಲಿ ಶಾಂತಿ, ನೆಮ್ಮದಿ ಸದಾ ನೆಲೆಗೊಳ್ಳುವಂತೆ ಮಾಡುವಳು

**- ಮೂರನೇ ದಿನ** ಚಂದ್ರ ಘಂಟಾ ದೇವಿಯ ಆರಾಧನೆ ಮಾಡಬೇಕು. ಇವಳು ದುಷ್ಟರ ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವವಳು ನಮ್ಮ ಮನಸ್ಸಿನಲ್ಲಿ ತುಂಬಿರುವ ಕಾಮ, ಕ್ರೋಧಾದಿ ಕಲ್ಮಶ ಗಳನ್ನು ಓಡಿಸಿ ನಮ್ಮ ಇಷ್ಟಾರ್ಥ ಗಳನ್ನು ಸಲ್ಲಿಸುವಳು ಇವಳು ಬೂದು ರಂಗಿನ ಪ್ರಿಯಳು ಬೂದು ವಸ್ತ್ರ ದಿಂದ ಅಲಂಕರಿಸಿ ಪೂಜಿಸಬೇಕು.

**- ನಾಲ್ಕನೇ ದಿನ** ಕೂಷ್ಮಾಂಡಾ ದೇವಿ ಕಿತ್ತಳೆ ಬಣ್ಣ ಪ್ರಿಯೆ ಇವಳು ಭಕ್ತರ ಅಭೀಷ್ಟ ಈಡೇರಿಸಿ ಸಕಲ ಪಾಪಗಳ ಕಳೆವಳು

**- ಐದನೇ ದಿನ** ಕಾರ್ತಿಕೇಯನ ತಾಯಿ ಸ್ಕಂದ ಮಾತೆ ಬರುವಳು. ಇವಳು ಬಿಳಿ ವರ್ಣ ಪ್ರಿಯಳು ಆರ್ತರಾಗಿ ಮೊರೆ ಹೋದವರನ್ನು ಬಿಡದೆ ರಕ್ಷಿಸುವಳು

**- ಆರನೇ ದಿನ** ಕಾಳ ರಾತ್ರ ದೇವಿ ಕಾಳಿಯಾಗಿ ಅಸುರರ ಮರ್ದಿಸಿದ ತಾಯಿ ಇವಳು. ಇವಳಿಗೆ ಕೆಂಪು ವರ್ಣ ಬಹು ಇಷ್ಟ. ಇವಳನ್ನು ಬೂದು ವರ್ಣದ ವಸ್ತ್ರ ದಿಂದ ಅಲಂಕರಿಸಿ ಪೂಜಿಸಬೇಕು

**- ಏಳನೇ ದಿನ** ಲಲಿತಾ ಮಾತೆ ನೀಲಿ ಬಣ್ಣ ಪ್ರಿಯಳು ಶಾಂತಿ ಪ್ರಿಯಳು ಭಕ್ತಿಯಿಂದ ಪೂಜಿಸಿದರೆ ಶೀಘ್ರ ಒಲಿಯುವ ದುರ್ಗೆ ಕಾರುಣ್ಯ ಮೂರ್ತಿ ಇವಳು

**- ಎಂಟನೇ ದಿನ** ಮಹಾಗೌರಿಯ ರೂಪದಲ್ಲಿ ದುರ್ಗೆ ಬರುವಳು. ಇವಳು ಗುಲಾಬಿ ವರ್ಣ ಪ್ರಿಯೆ ಶಿವನಿಂದ ಕಪ್ಪು ಬಣ್ಣವನ್ನು ಸ್ವಚ್ಛ ಗೊಳಿಸಿಕೊಂಡವಳು ಗುಲಾಬಿ ಬಣ್ಣ ಇವಳಿಗೆ ಇಷ್ಟವಾದ ವರ್ಣ

**- ಒಂಭತ್ತನೇ ದಿನ** ಸಿದ್ಧಿ ದಾತ್ರಿ ದೇವಿ ನೇರಳೆ ವರ್ಣ ಇವಳಿಗೆ ಪ್ರಿಯವಾದ ಬಣ್ಣ

ಹೀಗೆ ದುರ್ಗಾದೇವಿಯನ್ನು ನವ ವಿಧ ಅಲಂಕಾರದಲ್ಲಿ ನವ ವಿಧ ಭಕ್ತಿಯಿಂದ ಪೂಜಿಸಬೇಕು. ನವ ವಿಧದ ನೈವೇದ್ಯ ನೀಡಿ ಭಕ್ತಿಯಿಂದ ಪೂಜಿಸಲು ಶೀಘ್ರ ಒಲಿಯುವಳು ಕೆಲವು ಕಡೆ ಒಂಭತ್ತು ಉಪವಾಸ ಮಾಡಿ ಪೂಜಿಸುವ ಪದ್ಧತಿಯು ಇದೆ

ಇದು ನಾಡ ಹಬ್ಬ ಆಗಿರುವುದರಿಂದ ಸುಂದರ ನಗರ ಮೈಸೂರಿನಲ್ಲಿ ದಸರಾ ಉತ್ಸವ ನಡೆಯುವುದು. ತಾಯಿ ಚಾಮುಂಡೇಶ್ವರಿಯನ್ನು ಅಂಬಾರಿಯಲ್ಲಿ ಕೂಡಿಸಿ ಮೆರವಣಿಗೆ ಮಾಡುವರು

ಕಣ್ಣಿಗೆ ಹಬ್ಬ ಈ ದಸರಾ ಮೆರವಣಿಗೆ. ದೇಶ-ವಿದೇಶ ಗಳಿಂದ ಇದನ್ನು ನೋಡಲು ಪ್ರತಿ ವರ್ಷ ಪ್ರವಾಸಿಗರು ಬರುವರು. ಜಗದಂಬೆಯನ್ನು ನೋಡುವುದೇ ಒಂದು ಹಬ್ಬ

ಎಲ್ಲರ ಮನೆಗಳಲ್ಲಿ ಪಟ್ಟದ ಗೊಂಬೆ ನಾನಾ ವಿಧದ ಗೊಂಬೆಗಳನ್ನು ಇಟ್ಟು ಕಳಶ ವನ್ನು ಇಟ್ಟು ಸಂಭ್ರಮಿಸುವರು.

ತಿರುಪತಿಯಲ್ಲಿ ಒಂಭತ್ತು ದಿನವೂ ಶ್ರೀದೇವಿ, ಭೂದೇವಿ ಸಹಿತ ವೆಂಕಟೇಶ್ವರನಿಗೆ ಬ್ರಹ್ಮೋತ್ಸವ ನಡೆಯುವುದು ಒಂಭತ್ತು ದಿನವೂ ಬೇರೆ ಬೇರೆ ಅಲಂಕಾರ ಮಾಡಿ ಉತ್ಸವ ನಡೆಯುತ್ತದೆ. ಧ್ವಜಾರೋಹಣ ವಾಹನ ಅಲಂಕಾರ ಎಲ್ಲವು ಕಣ್ಮನ ತಣಿಸುತ್ತವೆ.

ಜಗದೊಡೆಯನ ಉತ್ಸವ ನೋಡಲು ಮನೋಹರ ಬ್ರಹ್ಮನು ನಡೆಸಿದ ಈ ಉತ್ಸವವು ಇಂದಿಗೂ ಸಂಭ್ರಮದ ಉತ್ಸವ. ಈ ಪವಿತ್ರ ನಾಡ ಹಬ್ಬದಲ್ಲಿ ಎಲ್ಲರೂ ಸಂಭ್ರಮಪಡೋಣ ಸಕಲರಿಗೂ ಸನ್ಮಂಗಳವಾಗಲಿ ಎಂದು ಹಾರೈಸೋಣ.

**- ಕೋಮಲ ವಿ. ಕುಮಾರ್**, ದಾವಣಗೆರೆ.

## ಪೋದಾರ್ ಶಾಲೆಯಲ್ಲಿ ಗಾಂಧೀಜಿ, ಶಾಸ್ತ್ರೀಜಿ ಜಯಂತಿ



ದಾವಣಗೆರೆ, ಅ. 4 - ಪೋದಾರ್ ಪ್ರೆಪ್ ವಿಭಾಗದಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು.

ಮಕ್ಕಳು ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ವೇಷ ಧರಿಸಿ ಅಹಿಂಸಾ ತತ್ತ್ವ ಪರಿಪಾಲನೆ, ಪೌಷ್ಟಿಕ ಆಹಾರದ ಬಳಕೆ, ಪ್ರಾಣಿಗಳ ರಕ್ಷಣಾ ವಿಧಾನ, ಸಮುದ್ರದಲ್ಲಿನ ಜಲಚರಗಳ ರಕ್ಷಣೆ, ಹಾಗು ಖಾದಿ ಬಟ್ಟೆಯ ಬಳಕೆಯಿಂದಾಗುವ ಉಪಯೋಗಗಳ ಬಗ್ಗೆ ಪೋಷಕರಿಗೆ ಚಟುವಟಿಕೆಗಳನ್ನು ಮಾಡುವುದರ ಮೂಲಕ ಅರಿವು ಮೂಡಿಸಿದರು.


ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮುಖೋಪಾಧ್ಯಾಯಿನಿ ಮೊನಾಲಿಸ ಸಿಂಗ್ ಮಾತನಾಡಿ, ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಇದು ಭಾರತದ ಇತಿಹಾಸದಲ್ಲಿ ಆಳವಾದ ಮಹತ್ವವನ್ನು ಹೊಂದಿದೆ. ಈ ದಿನದಂದು ಅಹಿಂಸೆ, ಸತ್ಯ, ತ್ಯಾಗ ಮತ್ತು ಅಚಲ ಸಂಕಲ್ಪದ ಮೂಲಕ ನಮ್ಮ ದೇಶವನ್ನು ಸ್ವಾತಂತ್ರ್ಯದತ್ತ ಮುನ್ನಡೆಸಿದ ಮಹಾನ್ ಚೇತನರಾದ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರಿಗೆ ನಾವು ನಮನ ಸಲ್ಲಿಸೋಣ ಎಂದರು. ಆಡಳಿತಾಧಿಕಾರಿ ಚಂದ್ರಕಾಂತ್ ದೇಸಾಯಿ ಉಪಸ್ಥಿತರಿದ್ದರು.

## ತಿಮ್ಮಪ್ಪನ ಪ್ರಸಾದ : ಎಸ್.ಐ.ಟಿ. ರಚನೆ

**(1ನೇ ಪುಟದಿಂದ)** ಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಈ ನ್ಯಾಯಾಲಯವನ್ನು ರಾಜಕೀಯ ಹೋರಾಟದ ಕಣವಾಗಿ ಬಳಸಲು ನಾವು ಅವಕಾಶ ನೀಡುವುದಿಲ್ಲ. ಆದರೆ ಕೋಟ್ಯಂತರ ಜನರ ಭಾವನೆಗಳಿಗೆ ಭರವಸೆ ನೀಡಲು ಸ್ವತಂತ್ರ ತನಿಖಾ ತಂಡವನ್ನು ರಚಿಸಲಾಗುತ್ತಿದೆ ಎಂದು ಪೀಠ ಹೇಳಿದೆ. ಸಿಬಿಐ ನಿರ್ದೇಶಕರ ಉಸ್ತುವಾರಿಯಲ್ಲಿ ತನಿಖೆ ನಡೆಸುವುದು ಸೂಕ್ತವಾಗಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

# ಜಲಜೀವನ್ ಮಿಷನ್ ಜಾರಿಯಲ್ಲಿ ಎಡವಿದ ಕೇಂದ್ರ : ಕಾಂಗ್ರೆಸ್



ನವದೆಹಲಿ, ಅ. 4 - ಜಲಜೀವನ್ ಮಿಷನ್ ಯೋಜನೆಗೆ ಅಗತ್ಯವಾದ ವೆಚ್ಚವನ್ನು ಅಂದಾಜಿಸುವಲ್ಲಿ ಕೇಂದ್ರದ ಮೋದಿ ಸರ್ಕಾರ ವಿಫಲವಾಗಿದೆ. ಇದರಿಂದಾಗಿ ಕಳೆದ ಐದು ವರ್ಷಗಳಲ್ಲಿ ನಿರೀಕ್ಷಿತ ಪ್ರಗತಿಯಾಗಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಬಗ್ಗೆ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಮಾರ್ಚ್ 2024ರ ವೇಳೆಗೆ ದೇಶದ ಎಲ್ಲಾ ಮನೆಗಳಿಗೆ ನಲ್ಲಿಗಳ ಮೂಲಕ ನೀರು ಪೂರೈಸಲಾಗುವುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 2019ರಲ್ಲಿ ಘೋಷಿಸಿದ್ದರು ಎಂದು ಹೇಳಿದರು.

ಈ ಗಡುವು ಮುಗಿದು ಏಳು ತಿಂಗಳು ಪೂರ್ಣಗೊಂಡಿದೆ. ಆದರೂ ಗುರಿ ತಲುಪಲು ಸಾಧ್ಯವಾಗಿಲ್ಲ. ಯೋಜನೆಯ ವೆಚ್ಚ ಈಗ ಎರಡು ಪಟ್ಟು ಹೆಚ್ಚಾಗಿದೆ. ಹಲವು ರಾಜ್ಯಗಳಲ್ಲಿ ಯೋಜನೆಗೆ ಹಣ ಹೊಂದಿಸಲಾಗಿದ್ದು, ಪ್ರಗತಿ ಸ್ಥಗಿತಗೊಂಡಿದೆ. ಕೇಂದ್ರ ಸರ್ಕಾರ ಶೇಕಡ 50 ರಿಂದ 60ರಷ್ಟು ವೆಚ್ಚ ಭರಿಸುವುದಾಗಿ ಹೇಳಿದ್ದರೂ ಯೋಜನೆಯಲ್ಲಿ ಪ್ರಗತಿ ಕಾಣುತ್ತಿಲ್ಲ ಎಂದು ಹೇಳಿದರು.

ಮಧ್ಯಪ್ರದೇಶದಲ್ಲಿ ರಾಜ್ಯ ಸರ್ಕಾರ ಈ ಯೋಜನೆಗೆ 7671 ಕೋಟಿ ರೂ.ಗಳನ್ನು ಒದಗಿಸಿದೆ. ಆದರೆ, ಕೇಂದ್ರ ಸರ್ಕಾರ 4044 ಕೋಟಿ ರೂ.ಗಳನ್ನು ಮಾತ್ರ ಒದಗಿಸಿದೆ ಎಂದು ರಮೇಶ್ ಹೇಳಿದರು.

ದೇಶಾದ್ಯಂತ ಸಾವಿರಾರು ಕೋಟಿ ರೂ.ಗಳ ಪಾವತಿ ಬಾಕಿ ಉಳಿದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಧ್ಯಪ್ರದೇಶ ಸೇರಿದಂತೆ, ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಇದು ಯೋಜನೆಯ ಅಗಾಧ ಅವ್ಯವಸ್ಥೆ ಎಂದು ರಮೇಶ್ ಟೀಕಿಸಿದರು.

## ಹಾಸ್ಟೆಲ್ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಅ. 4- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಹೊಸದಾಗಿ ವೃತ್ತಿಪರ ಕೋರ್ಸ್‌ಗಳಾದ ಪದವಿ, ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವರ್ಗ 1, 2ಎ.ಬಿ, 3ಎ.ಬಿ ಹಾಗೂ ಪ.ಜಾತಿ, ಪ.ಪಂಗಡದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು https;//shp.karnataka.gov.in/bcwd ಮೂಲಕ ಅಕ್ಟೋಬರ್ 30 ರೊಳಗಾಗಿ ಅರ್ಜಿ ಸಲ್ಲಿಸಲು ಜಿಲ್ಲಾ ಬಿಸಿಎಂ ಅಧಿಕಾರಿ ಗಾಯತ್ರಿ ಕೆ.ಹೆಚ್ ತಿಳಿಸಿದ್ದಾರೆ.

## ತ್ರಿಕೂಟಾಚಲ ದೇವಾಲಯದಲ್ಲಿ ನವರಾತ್ರಿ ಉತ್ಸವ

ದಾವಣಗೆರೆ, ಅ.4- ತ್ರಿಕೂಟಾಚಲ ಸೇವಾ ಟ್ರಸ್ಟ್‌ನಿಂದ ಕೋಡಿಹಳ್ಳಿ ರಸ್ತೆಯಲ್ಲಿರುವ ತ್ರಿಕೂಟಾಚಲ ದೇವಾಲಯದಲ್ಲಿ ನವರಾತ್ರಿ ಅಂಗವಾಗಿ ಇದೇ ದಿನಾಂಕ 12 ರವರೆಗೆ ಐತಿಹಾಸಿಕ ಲೋಕನಾಯಕಿ ಲೋಕಿಕೆರೆಯ ಶ್ರೀ ವಿಜಯದುರ್ಗಾ ಪರಮೇಶ್ವರಿ, ಉಮಾ ಮಹೇಶ್ವರಿ, ಲಕ್ಷ್ಮೀ ವೆಂಕಟೇಶ್ವರ ತ್ರಿಕೂಟಾಚಲ ಅಮ್ಮನವರ 9 ದಿನಗಳ ಉತ್ಸವ ನಡೆಯಲಿದೆ. ಪ್ರತಿ ನಿತ್ಯ ದೇವಿಗೆ ವಿಶೇಷ ಪೂಜೆ. ಅಲಂಕಾರ, ಅಭಿಷೇಕ, ಕುಂಕುಮಾರ್ಚನೆ, ಕ್ಷೀರಾಭಿಷೇಕ ಮತ್ತು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ನಾಡಿದ್ದು ದಿನಾಂಕ 6 ರಂದು ರಾಜ್ಯಪ್ರಶಸ್ತಿ ಪುರಸ್ಕಾರ ಪಡೆದ ಯುಗಧರ್ಮ ರಾಮಣ್ಣ ಇವರಿಂದ ತತ್ವಪದಗಳ ಗಾಯನ ನಡೆಯಲಿದ್ದು, ಟಿವಿ ಧಾರಾವಾಹಿ ನಟ ದಾಗಿನಕಟ್ಟೆ ಸಿದ್ದಪ್ಪನವರಿಂದ ಭಕ್ತಿಗೀತೆಗಳ ಕಾರ್ಯಕ್ರಮವಿದೆ ಎಂದು ಧರ್ಮದರ್ಶಿ ಕತ್ತಲಗೆರೆ ತಿಪ್ಪಣ್ಣ ತಿಳಿಸಿದ್ದಾರೆ.

## ಶೌಚಾಲಯ ತೆರಿಗೆ ಹೇರಿಲ್ಲ : ಸಿಎಂ ಸ್ಪಷ್ಟನೆ

ಶಿಮ್ಲಾ, ಅ. 4 – ಹಿಮಾಚಲ ಪ್ರದೇಶದಲ್ಲಿ ಶೌಚಾಲಯ ತೆರಿಗೆ ಹೇರಿಲ್ಲ ಎಂದು ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು ತಿಳಿಸಿದ್ದಾರೆ.

ಕಳೆದ ಸೆಪ್ಟಂಬರ್ 21ರಂದು ರಾಜ್ಯ ಜಲಶಕ್ತಿ ಇಲಾಖೆ ಅಧಿಸೂಚನೆ ಹೊರಡಿಸಿ, ನಗರ ಪ್ರದೇಶಗಳಲ್ಲಿ ಪ್ರತಿ ಶೌಚಾಲಯಕ್ಕೆ 25 ರೂ. ತೆರಿಗೆ ವಿಧಿಸಲಾಗುವುದು ಹಾಗೂ ಗ್ರಾಮೀಣ ಭಾಗದಲ್ಲಿ 100 ರೂ. ತೆರಿಗೆ ವಿಧಿಸಲಾಗುವುದು ಎಂದು ತಿಳಿಸಿತ್ತು. ಆದರೆ ಉಪಮುಖ್ಯಮಂತ್ರಿ ಮುಕೇಶ್ ಅಗ್ನಿಹೋತ್ರಿ ಅವರ ಗಮನಕ್ಕೆ ಈ ವಿಷಯ ಬಂದಾಗ, ಈ ಅಧಿಸೂಚನೆಯನ್ನು ವಾಪಸ್ ಪಡೆಯಲಾಗಿತ್ತು. 2018ರಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಶೌಚಾಲಯ ತೆರಿಗೆ ಹೇರಿತ್ತು ಎಂದು ಅಗ್ನಿಹೋತ್ರಿ ಆರೋಪಿಸಿದ್ದರು. ಸರ್ಕಾರ ಈಗಾಗಲೇ ನೀರಿನ ಬಳಕೆಯ ಬಿಲ್‌ನ ಶೇಕಡ 30ರಷ್ಟು ಕೊಳಚೆ ತೆರಿಗೆಯಾಗಿ ವಸೂಲಿ ಮಾಡುತ್ತಿದೆ.

ಈ ವಿಷಯವನ್ನು ಪ್ರಸ್ತಾಪಿಸಿದ್ದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ, ಶೌಚಾಲಯಗಳ ಮೇಲೆ ತೆರಿಗೆ ಹೇರುವ ಮೂಲಕ ಹಿಮಾಚಲ ಪ್ರದೇಶ ಸರ್ಕಾರ ಬೌದ್ಧಿಕವಾಗಿ ದಿವಾಳಿಯಾಗಿದೆ ಎಂದಿದ್ದರು. ನಂತರ ಈ ಬಗ್ಗೆ ಸ್ಪಷ್ಟನೆ ನೀಡಿರುವ ಮುಖ್ಯಮಂತ್ರಿ ಸುಖು, ಹರಿಯಾಣ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ಶೌಚಾಲಯ ತೆರಿಗೆ ವಿಷಯವನ್ನು ಸೃಷ್ಟಿಸುತ್ತಿದೆ ಎಂದು ಹೇಳಿದ್ದಾರೆ.

# ಖಾಸಗಿ ಸಹಭಾಗಿತ್ವದಲ್ಲಿ ವಿನೂತನ ಯೋಜನೆ

**(1ನೇ ಪುಟದಿಂದ)** ಕಂಪನಿ ಸಹ ಭಾಗಿಯಾಗಿದೆ ಎಂದು ತಿಳಿಸಿದರು.

ಪ್ರತಿ ದಿನ 2 ಗಂಟೆಯಂತೆ 90 ದಿನಗಳ ಕಾಲ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಬೇತಿ ನೀಡಲಾಗುವುದು. ಇದಕ್ಕಾಗಿ 1,120 ವಿದ್ಯಾರ್ಥಿಗಳು ನೋಂದಣಿಯಾಗಿದ್ದಾರೆ ಎಂದವರು ಹೇಳಿದರು.

ಅಲ್ಲದೇ, ವಿದ್ಯಾರ್ಥಿಗಳಿಗೆ 17 ವರ್ಷಗಳ ಪ್ರಶ್ನೆಪತ್ರಿಕೆಯನ್ನೂ ನೀಡಲಾಗುವುದು. ಪ್ರತಿ ವಾರ ಪರೀಕ್ಷೆ ನಡೆಸಲಾಗುವುದು ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲಾಗುವುದು ಎಂದು ಸಂಸದೆ ಹೇಳಿದರು.

ಈ ತರಬೇತಿ ಪೂರ್ಣಗೊಳಿಸಿದ ನಂತರ, ವಿದ್ಯಾರ್ಥಿಗಳಿಗೆ ಕ್ರ್ಯಾಶ್ ಕೋರ್ಸ್ ನೀಡುವ ಉದ್ದೇಶವೂ ಇದೆ. ಇದರ ಜೊತೆಗೆ ಎಸ್. ಎಸ್. ಜನಕಲ್ಯಾಣ ಟ್ರಸ್ಟ್ ಮೂಲಕ ವಿದ್ಯಾರ್ಥಿ ವೇತನದ ನೆರವು ನೀಡಲಾಗುವುದು ಎಂದವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಯ್ಯ, ತಂದೆ, ತಾಯಿಗಳು ಕಷ್ಟಪಟ್ಟು ದುಡಿದು ನಿಮಗೆ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿರುತ್ತಾರೆ. ನೀವು ಅವರಿಗೆ ನಿಮ್ಮ ಸಾಧನೆಯ ಮೂಲಕ ಗೌರವ ತರಬೇಕು ಎಂದು ತಿಳಿಸಿದರು.

ಜಿ.ಪಂ. ಸಿಇಒ ಸುರೇಶ್ ಇಟ್ನಾಳ್ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಮಂಡಳಿ ಪರೀಕ್ಷೆಗೆ ಒತ್ತು ನೀಡಲಾಗುತ್ತದೆ. ಖಾಸಗಿ ಶಾಲೆಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಒತ್ತು ನೀಡಲಾಗುತ್ತದೆ. ಈ ಬಾರಿ, ಖಾಸಗಿ ಹಾಗೂ ಸರ್ಕಾರಿ ಸಹಭಾಗಿತ್ವದಲ್ಲಿ ತರಬೇತಿ ನೀಡುವ ಮೂಲಕ ಮಂಡಳಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳೆರಡಕ್ಕೂ ನೆರವು ನೀಡಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ವಿದ್ಯಾರ್ಥಿಗಳು ಈ ಕಾರ್ಯಕ್ರಮ ಎಷ್ಟು ಗಂಭೀರವಾಗಿ ಪರಿಗಣಿಸುತ್ತಾರೆ ಎಂಬುದರ ಮೇಲೆ ಯಶಸ್ಸು ನಿರ್ಧಾರವಾಗುತ್ತದೆ. ಇಡೀ ಜಿಲ್ಲಾ ವ್ಯವಸ್ಥೆ ವಿದ್ಯಾರ್ಥಿಗಳ ಪರವಾಗಿದೆ. ವಿದ್ಯಾರ್ಥಿಗಳು ಈ ಸೌಲಭ್ಯದ ಪ್ರಯೋಜನ ಪಡೆಯಬೇಕು ಎಂದರು.

ಇದೇ ವೇಳೆ ಯೂಟ್ಯೂಬ್ ಚಾನೆಲ್‌ಗೆ ಚಾಲನೆ ನೀಡಲಾಯಿತು. ವಿದ್ಯಾರ್ಥಿಗಳಿಗೆ ಸಿಇಟಿ - ನೀಟ್ ಪುಸ್ತಕ ವಿತರಿಸಲಾಯಿತು

ವೇದಿಕೆಯ ಮೇಲೆ ಮೇಯರ್ ಚಮನ್ ಸಾಬ್, ಡಿಡಿಪಿಯು ಎಸ್.ಜಿ. ಕರಿಸಿದ್ದಪ್ಪ, ಖಾಸಗಿ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿ ಸಂಘದ ಅಧ್ಯಕ್ಷ ಎಸ್.ಜೆ. ಶ್ರೀಧರ್, ಕಾರ್ಯದರ್ಶಿ ಜಯಂತ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಗಾಯತ್ರಿ ಮತ್ತಿತರರು ಉಪಸ್ಥಿತರಿದ್ದರು.

## ಸಭೆಯಲ್ಲಿ ಚರ್ಚಿಸಿ ನಿರ್ಧಾರ

**(1ನೇ ಪುಟದಿಂದ)** ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಜಿ.ಟಿ.ದೇವೇಗೌಡ ಜೆಡಿಎಸ್ ಪಕ್ಷದ ಕೋರ್ ಕಮಿಟಿ ಅಧ್ಯಕ್ಷರಾಗಿದ್ದು, ಹೇಳಿಕೆ ಸರಿಯಾಗಿಯೇ ಇರುತ್ತದೆ, ಬಿಜೆಪಿ ಮತ್ತು ಜೆಡಿಎಸ್‌ನವರಿಗೆ ನಾನು ಅಧಿಕಾರದಲ್ಲಿದ್ದರೆ, ಅವರ ಪಕ್ಷಗಳು ದುರ್ಬಲವಾಗುವ ಭಯ ಕಾಡುತ್ತಿದೆ ಎಂದರು.

ಸಚಿವ ಸತೀಶ್ ಜಾರಕಿಹೊಳಿ ಪಕ್ಷದ ವರಿಷ್ಠರನ್ನು ಭೇಟಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿ, ಎಐಸಿಸಿ ಅಧ್ಯಕ್ಷರಾಗಿರುವ ಖರ್ಗೆ ಅವರನ್ನು ಸಚಿವರಾಗಿರುವ ಸತೀಶ್ ಜಾರಕಿಹೊಳಿ ಭೇಟಿಯಾಗುವುದರಲ್ಲಿ ತಪ್ಪೇನಿಲ್ಲ. ಇಲ್ಲ-ಸಲ್ಲದ ಊಹಾಪೋಹಗಳಿಗೆ ಅವಕಾಶ ನೀಡಬಾರದು ಎಂದರು.

## ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ




**ರಾಣೇಬೆನ್ನೂರು**

ರಾಣೇಬೆನ್ನೂರು, ಅ. 4- ಮಹಾತ್ಮಾಗಾಂಧಿ ಅವರು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಬೆಳಗಾವಿಯಲ್ಲಿ ಮೊದಲ ಅದಿವೇಶನ ನಡೆಸಿ ನೂರು ವರ್ಷಗಳಾಗಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶದಂತೆ ಇಲ್ಲಿನ ಶಾಸಕ ಪ್ರಕಾಶ ಕೋಳಿವಾಡ ನೇತೃತ್ವದಲ್ಲಿ ಶತಮಾನೋತ್ಸವ ಆಚರಿಸಲಾಯಿತು.

ಇಲ್ಲಿನ ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟ ಪಾದಯಾತ್ರೆ ನ್ಯಾಯಾಲಯದ ಆವರಣದಲ್ಲಿರುವ ಸ್ವಾತಂತ್ರ್ಯ ಯೋಧರ ಸ್ಮಾರಕಕ್ಕೆ ಆಗಮಿಸಿ ಗೌರವ ಸಮರ್ಪಿಸಿದರು.

ಶಾಸಕ ಪ್ರಕಾಶ ಕೋಳಿವಾಡ ಜೊತೆ ಕಾಂಗ್ರೆಸ್ ಅಧ್ಯಕ್ಷ ಮಂಜನಗೌಡ ಪಾಟೀಲ, ಶೇರು ಕಾಬೂಲಿ, ಇರ್ಫಾನ್ ದಿಡಗೂರ, ಇಕ್ಬಾಲ್ ರಾಣೇಬೆನ್ನೂರು, ಬಸವರಾಜ ಹುಚ್ಚಗೊಂಡರ ಹಾಗೂ ಇತರರು ಭಾಗವಹಿಸಿದ್ದರು.

## ನಗರದ ರಾಷ್ಟ್ರೋತ್ಥಾನ ಶಾಲೆಯಿಂದ ಇಂದು ಸಾಂಸ್ಕೃತಿಕ ಕಾರ್ಯಕ್ರಮ

ವಿಶ್ವ ಹಿಂದೂ ಪರಿಷದ್ ಹಾಗೂ ಸಾರ್ವಜನಿಕ ವಿಜಯದಶಮಿ ಮಹೋತ್ಸವ ಸಮಿತಿ (ದಾವಣಗೆರೆ) ಇವರ ಆಶ್ರಯದಲ್ಲಿ ವಿಜಯ ದಶಮಿ ಕಾರ್ಯಕ್ರಮದ ಅಂಗವಾಗಿ ಇಂದು ಸಂಜೆ 6 ರಿಂದ 8 ರವರೆಗೆ ನಗರದ ಶ್ರೀ ಬೀರಲಿಂಗೇಶ್ವರ ಮೈದಾನದಲ್ಲಿ ರಾಷ್ಟ್ರೋತ್ಥಾನ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

**ಸೈಟುಗಳು ಮಾರಾಟಕ್ಕಿವೆ**
ಶಾಮನೂರ ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 80x60 North 40 ಅಡಿ ರೋಡಿಗಿದೆ, 30x43 North, 40x60, 40x60 North ಅಕ್ಕ-ಪಕ್ಕ, 30x40 North, 30x60 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
1) ಬನಶಂಕರಿ ಲೇಔಟ್‌ನಲ್ಲಿ 30x38 West 40 ಅಡಿ ರೋಡಿಗಿದೆ. Rate - 4000/-
2) ಡಾಲರ್ಸ್ ಕಾಲೋನಿಯಿಂದ ಮೇಲೆ 30x50 North, Rate - 3600/-
3) ಕರ್ನಾಟಕ ರಾಜ್ಯ ನೌಕರರ ಲೇಔಟ್‌ನಲ್ಲಿ 30x40 South 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಫ್ಲಾಟ್ ಲೀಸ್‌ಗೆ ಇವೆ.
ಸಂಪರ್ಕಿಸಿ
99807 28533

**WANTED**
Applications are invited for the post of Audit Assistant
- No. of Vacancies : 2
- Min.Qualification: Any graduation with Computer Knowledge
Shankar & Co., Tax Practitioner
Opp. To Arogya Maatha Hospital, Amaravathi Housing Colony, P. B. Road, Harihar
Ph: 81975 70094, 98459 38268

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ 40x80 East, 30x84 Corner, 30x60 West, 40x40 East, 30x54 North, 30x40 North, 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಕಾಫೀ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ
ಎ.ಎನ್.ಎಸ್. ಫುಡ್
ಮಂಡಿಪೇಟೆ, ದಾವಣಗೆರೆ.
94482 72734

**ಬೇಕಾಗಿದ್ದಾರೆ**
ಪೆಟ್ರೋಲ್ ಪಂಪ್‌ನಲ್ಲಿ ಕೆಲಸಕ್ಕೆ ಹುಡುಗ / ಹುಡಿಗಿಯರು ಬೇಕಾಗಿದ್ದಾರೆ. ಸಂಬಳ - 10000/- ಸಂಪರ್ಕಿಸಿ :
63641 33480

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ.
ಬೈಕ್‌ವುಳ್ಳವರಿಗೆ ಮೊದಲ ಆದ್ಯತೆ.
94823 89317

**FOR SALE**
Industrial Estate Lokikere Road, Plot No. M-8, 2nd Cross, Davangere.
Measurement: 75x150, 3000 sqft shed, 37 HP Power
98867 26258, 96207 78993

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇ ಔಟ್, ಡಾಲರ್ಸ್ ಕಾಲೋನಿ, ಕೆಹೆಚ್‌ಬಿ, ನಂದಿನಿ ಲೇ ಔಟ್, ಬನಶಂಕರಿ ಬಡಾವಣೆ, ಶಕ್ತಿನಗರ, ವಿಶ್ವಚೇತನ ಸ್ಕೂಲ್ ಹತ್ತಿರ, 40x60, 50x50, 30x50, 30x40 ಸೈಟುಗಳು ದೊರೆಯುತ್ತವೆ
95385 65909

**ಜಮೀನು ಮಾರಾಟಕ್ಕೆ ಇದೆ**
ತುಂಗಭದ್ರಾ ನದಿ ದಡಕ್ಕೆ ಹೊಂದಿಕೊಂಡಿರುವ 4 ಎಕರೆ 10 ಗುಂಟೆ ನಿರಾವರಿ ಜಮೀನು 25 ಲಕ್ಷಕ್ಕೆ 1 ಎಕರೆ. ಬ್ರೋಕರ್‌ಗಳಿಗೆ ಪ್ರವೇಶ ಇಲ್ಲಾ ಮುದೇನೂರು ಗ್ರಾಮ ರಾಣೇಬೆನ್ನೂರ್ ತಾಲ್ಲೂಕು. ಸಂಪರ್ಕಿಸಿ :
96638 69555

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಡಿಗ್ರಿ ಪಾಸಾದ 18/35 ವರ್ಷದೊಳಗಿನ ಹುಡುಗರು/ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ MS Office ಆದವರಿಗೆ ಮೊದಲ ಆದ್ಯತೆ. ಆಕರ್ಷಕ ವೇತನ ನೀಡಲಾಗುವುದು.
ಈ ಕೆಳಗಿನ ಫೋನ್‌ಗೆ ಸಂಪರ್ಕಿಸಿ:
89708 16788

**ಬೇಕಾಗಿದ್ದಾರೆ**
ಸೆರಾಕೇರ್ HTB ಹೆಲ್ತ್ ಟೆಕ್
ಜಯದೇವ ಸರ್ಕಲ್ ದಾವಣಗೆರೆ ಇಲ್ಲಿ ಕೆಲಸ ಮಾಡಲು ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, PUC, any Degree. 6 ತಿಂಗಳ ತರಬೇತಿ ವೇತನದೊಂದಿಗೆ ತಿಂಗಳಿಗೆ 8000.
72598 75931

**ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ಪಿಬಿ ರಸ್ತೆ, ಫೈರಿಂಜಿನ್ ಆಫೀಸ್ ಪಕ್ಕ, ಕೆಎಸ್‌ಆರ್‌ಟಿಸಿ ಹತ್ತಿರ, ಎಪಿಎಂಸಿ ಕ್ವಾಟರ್ಸ್‌ಗೆ ಹೊಂದಿಕೊಂಡಿರುವ 24x28 ಅಳತೆಯ ಮಳಿಗೆ ಬಾಡಿಗೆಗಿದೆ.
97388 27452

**WANTED SOUTH INDIAN CHEF**
Batru Bekagiddare
South Indian
89704 49036

**ಮೊದಲನೆ ಮಹಡಿ ಮನೆ / ಎರಡನೇ ಮಹಡಿ ರೂಮ್ ಬಾಡಿಗೆಗೆ**
ಜೆ.ಹೆಚ್. ಪಟೇಲ್ ಬಡಾವಣೆ 'ಸಿ' ಬ್ಲಾಕ್, 2ನೇ ಮೇನ್, ಶಾಮನೂರು ದಂತ ಭವನ ಎದುರು.
98863 84948

**ಮಳಿಗೆ ಮಾರಾಟಕ್ಕೆ/ಬಾಡಿಗೆಗೆ ಇದೆ**
ಡೋ.ನಂ. 80/6, ರೇಣುಕಾ ಮಂದಿರದ ಎದುರು, ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, 2ನೇ ಮುಖ್ಯರಸ್ತೆಯಲ್ಲಿ ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಒಟ್ಟು 650 ಚದುರಡಿ ಇರುವ ಮಳಿಗೆ ಮಾರಾಟಕ್ಕೆ/ಬಾಡಿಗೆಗೆ ಇದೆ.
93422 96777

**ಮನೆಗೊಂದು ಮರ ಊರಿಗೊಂದು ವನ**

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

**ಲ್ಯಾಬ್ ಟೆಕ್ನೀಷಿಯನ್ ಕೆಲಸಕ್ಕೆ ಬೇಕಾಗಿದ್ದಾರೆ**
ಹುಡುಗ ಅಥವಾ ಹುಡುಗಿಯರು ಬೇಕಾಗಿದ್ದಾರೆ.
ಗುರುನಾಥ ಆಸ್ಪತ್ರೆ, ಕೆ.ಆರ್. ರಸ್ತೆ, ದಾವಣಗೆರೆ.
96633 67838

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಕಂಪ್ಯೂಟರ್ ಟೈಪಿಸ್ಟ್ ಬೇಕಾಗಿದ್ದಾರೆ**
ಕಂಪ್ಯೂಟರ್‌ನಲ್ಲಿ ಇಂಗ್ಲಿಷ್ ಹಾಗೂ ಕನ್ನಡ ಟೈಪ್ ಮಾಡಲು ಪುರುಷ/ಮಹಿಳೆ ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಗ್ಗೆ 8 ರಿಂದ 10 ಗಂಟೆವರೆಗೆ (2 ಗಂಟೆ ಮಾತ್ರ)
ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ (ರಿ.), ಚನ್ನಗಿರಿ ರಂಗಪ್ಪ ಗಡಿಯಾರ ಕಂಬದ ಎದುರು, ರೈಲ್ವೆ ಸ್ಟೇಷನ್ ರಸ್ತೆ, ದಾವಣಗೆರೆ - 1.
94481 10895

**ಬೇಕಾಗಿದ್ದಾರೆ**
ವೆಯ್ಟರ್ಸ್, ಕ್ಯಾಪ್ಟನ್, ಬಿಲ್ಲಿಂಗ್, ಕೌಂಟರ್ ಸೇಲ್ಸ್ ಬೇಕಾಗಿದ್ದಾರೆ. ಪಾರ್ಟ್‌ಟೈಂ, ಫುಲ್‌ಟೈಂ
ಹೋಟೆಲ್ ಪುಡ್ಡೀಸ್
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ.
98861 56688

**ಬೇಕಾಗಿದ್ದಾರೆ**
ಕಛೇರಿ ಕೆಲಸಕ್ಕೆ ಅನುಭವಿ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ದಾವಣಗೆರೆ ನಗರದ ಮಹಿಳಾ ಅಭ್ಯರ್ಥಿಗೆ ಆದ್ಯತೆ.
94480 13311, 63617 92665

**ಶಾಲೆ / ಕಾಲೇಜ್ / ಆಫೀಸ್‌ಗಳಲ್ಲಿ**
ತಿಂಗಳ ಬಾಡಿಗೆ ಆಧಾರದಲ್ಲಿ EECO VAN (NEW) ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಿ :
91486 81600

**WANTED**
ಬೇಕಾಗಿದ್ದಾರೆ
X-RAY TECHNICIAN
LOCATION : HARIHARA
9739119466

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**REQUIRED**
Experienced, Accountant having Tally and GST knowledge are required to work in Office.
REDDY ASSOCIATIES
# 82/19,P B Road, Beside Wellness Stores, Opp: Renuka Manidar, Davangere.
99000 22030

**WANTED**
* Marketing Executive
* Graphic Designer
* Video editor
* Sale manager
Send your Resume to Whatsapp No.
99019 11421

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**SSLC/ PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಕೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**ಸೈಟು ಮಾರಾಟಕ್ಕಿದೆ**
30x40 ಆರ್.ಬಿ. ಬಡಾವಣೆ, ಆವರಗೆರೆ.
ಸಿದ್ಧಗಂಗಾ ಬಡಾವಣೆ 20x36 ಮಾರಾಟಕ್ಕಿದೆ.
ಮೊ: 97430 17668


**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ
ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ.
ವಯಸ್ಸು : 25 ರಿಂದ 40ರ ಒಳಗೆ
ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ, ಮಂಡಿಪೇಟೆ, ದಾವಣಗೆರೆ.
94482 72734


## ಶಕ್ತಿ ದೇವತೆಯರಿಗೆ ನವರಾತ್ರಿ ಅಲಂಕಾರ


ನಗರ ದೇವತೆ ದುರ್ಗಾಂಬಿಕದೇವಿಗೆ ಹಂಸ ವಾಹನ ಅಲಂಕಾರ



ನಿಟುವಳ್ಳಿ ದುರ್ಗಾಂಬಿಕಾದೇವಿಗೆ ಬ್ರಹ್ಮಚಾರಿಣಿ ಅಲಂಕಾರ



ಶಾರದಾಂಬ ದೇವಸ್ಥಾನದಲ್ಲಿ ಹಂಸ ವಾಹನ ಅಲಂಕಾರ


ದಾವಲ್ ಪೇಟೆ ಚೌಡೇಶ್ವರಿ ದೇವಿಗೆ ಅಡಿಕೆ, ವೀಳ್ಯೆದೆಲೆ ಅಲಂಕಾರ


ಚಿತ್ರಗಾರಗಲ್ಲಿ ನಿಮಿಷಾಂಬಾ ದೇವಿಗೆ ಅರಿಸಿಣ, ಕುಂಕುಮ ಅಲಂಕಾರ



ಹಳೇಬೇತೂರು ರಸ್ತೆ ಬನಶಂಕರಿಗೆ ಈಶ್ವರಿ ಅಲಂಕಾರ


ಹಳೇಪೇಟೆಯ ಕಾಳಿಕಾ ದೇವಿಗೆ ಎಲೆ ಅಲಂಕಾರ


ಕೆಟಿಜೆ ನಗರ ಶ್ರೀ ತುಳಜಾಭವಾನಿ ದೇವಿಗೆ ನೋಟಿನ ಅಲಂಕಾರ


ದೇವಾಂಗಪೇಟೆ ಶ್ರೀ ಬನಶಂಕರಿ ದೇವಿಗೆ ಅಕ್ಷತೆ ಅಲಂಕಾರ



ಜಯದೇವ ವೃತ್ತದ ಶಾರದಾಂಬೆಗೆ ಬ್ರಹ್ಮಚಾರಿಣಿ ಆರಾಧನೆ ಅಲಂಕಾರ



ದೇವಾಂಗಪೇಟೆ ಶ್ರೀ ಬನಶಂಕರಿ ದೇವಿಗೆ ಅಕ್ಷತೆ ಅಲಂಕಾರ


ಕೆಟಿಜೆ ನಗರ 11ನೇ ತಿರುವಿನಲ್ಲಿರುವ ಶ್ರೀ ತುಳಜಾ ಭವಾನಿ ಅಮ್ಮನವರ ಇಂದಿನ ಅಲಂಕಾರ


ವಿದ್ಯಾನಗರ ಶಿವ ಪಾರ್ವತಿ ದೇವಸ್ಥಾನದಲ್ಲಿ ಪುಷ್ಪಾಲಂಕಾರ


ಎಸ್.ಕೆ.ಪಿ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಿಗೆ ಮಹೇಶ್ವರಿದೇವಿ ಅಲಂಕಾರ.


ಉಚ್ಚಂಗೆಮ್ಮ ದೇವಿಯ ಇಂದಿನ ಅಲಂಕಾರ ಉಚ್ಚಂಗಿದುರ್ಗ


ಶ್ರೀ ಬನ್ನಿ ಕಾಳಿಕಾಂಬ ದೇವಸ್ಥಾನ . ಕುಂಬಾರ ಪೇಟೆ,

## ಸರ್ ಎಂ.ವಿ. ಪ.ಪೂ. ಕಾಲೇಜಿನ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ



ದಾವಣಗೆರೆ,ಅ.4- ನಗರದ ಸರ್.ಎಂ.ವಿ. ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ, ಹಲವು ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಪುರುಷರ ವಿಭಾಗದಲ್ಲಿ ಪುನೀತ್ ಹ್ಯಾಂಡ್‌ಬಾಲ್, ಬಾಸ್ಕೆಟ್‌ಬಾಲ್‌ನಿಂದ ಹರ್ಷವರ್ಧನ್, ಅಮೋಘ ಮತ್ತು ಆದಿತ್ಯ, ಷಟಲ್‌ಬ್ಯಾಡ್ಮಿಂಟನ್‌ನಿಂದ ಚಿನ್ಮಯಿ, ಅಭಿಷೇಕ್, ಪ್ರಣವ್ ಮತ್ತು ಅಮೋಘ. ಟೇಬಲ್ ಟೆನ್ನಿಸ್‌ನಿಂದ, ಶ್ರೀರಾಮ್ ಥ್ರೋಬಾಲ್, ದರ್ಶ, ಭುವನ್ ಮರೋಳ್, ರಿಷಬ್, ವಂಶಿ ಟಿ. ಆರ್., ಕಾಂತೇಶ್ ಸಿ.ಪಿ. ಸ್ವಿಮ್ಮಿಂಗ್, ಆದರ್ಶ, ಭರತ್ ಇವರುಗಳು ಚೆಸ್‌ನಲ್ಲಿ, ರೋಹಿತ್, ಗಗನ್, ಅಥ್ಲೆಟಿಕ್ಸ್, ಸೌಗಂಧ್ ಕರಾಟೆ, ಮಾರ್ತಾಂಡಪ್ಪ ಯೋಗಾಸನ ಹಾಗೂ ಪುನೀತ್ ಎಂ. ತಿಳುವಳ್ಳಿ ಇವರು ಟೆನಿಕಾಯ್ಟ್ ಕ್ರೀಡೆಯಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಯಶಸ್ವಿನಿ ಮತ್ತು ಮನಸ್ವಿ ಬಾಸ್ಕೆಟ್‌ಬಾಲ್‌ನಿಂದ, ಮೇಘನ ಷಟಲ್‌ಬ್ಯಾಡ್ಮಿಂಟನ್, ಪರಿಣಿಕ ಮತ್ತು ಧನ್ವಿ, ಚೆಸ್ ಹಾಗೂ ಸಿಂಚನ ಅಥ್ಲೆಟಿಕ್ಸ್ ಕ್ರೀಡೆಯಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



## ಸಮಗ್ರ ಬೆಳೆಗಳನ್ನು ಅಳವಡಿಸಿಕೊಂಡಿದ್ದರೆ ಮಾತ್ರ ಉತ್ತಮ ಇಳುವರಿ ಪಡೆಯಲು ಸಾಧ್ಯ

ದಾವಣಗೆರೆ, ಅ.4- ಮೈಕ್ರೋಬಿ ಫೌಂಡೇಶನ್ ವಾರ್ಷಿಕ ಮಹಾಸಭೆ ಇತ್ತೀಚೆಗೆ ಸಂಸ್ಥೆಯ ಅಧ್ಯಕ್ಷ ಬಿ.ಸಿ. ರುದ್ರೇಶ್ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಸಂಚಾಲಕ ದಿದ್ದಿಗಿ ಮಹದೇವಪ್ಪ ಅವರ ನೇತೃತ್ವದಲ್ಲಿ ನಡೆಯಿತು.

ಇದೇ ವೇಳೆ ಮಾತನಾಡಿದ ಮಹದೇವಪ್ಪ ಅವರು, ಇಂದಿನ ತೋಟಗಾರಿಕಾ ಕೃಷಿ ಎನ್ನುವುದು ಪ್ರಕೃತಿಗೆ ಪೂರಕ ವಾಗಿದ್ದರೆ, ಸುಸ್ಥಿರವಾಗಿದ್ದರೆ, ಸಮಗ್ರ ಬೆಳೆಗಳನ್ನು ಅಳವಡಿ ಸಿಕೊಂಡಿದ್ದರೆ ಮಾತ್ರ ಉತ್ತಮ ಇಳುವರಿ ಪಡೆಯಲು ಸಾಧ್ಯ ಎಂದರು. ಅತಿಯಾದ ರಾಸಾಯನಿಕಗಳಿಂದ ನಮ್ಮ ರಾಜ್ಯದಲ್ಲಿ ಶೇ. 55 ರಷ್ಟು ಭೂಮಿ ಇಂದು ಬರಡಾಗಿದೆ. ಇದನ್ನು ಮರುಜೀವಗೊಳಿಸಲು ಕನಿಷ್ಠ ತ್ಯಾಜ್ಯಗಳನ್ನು ಮತ್ತು ಬೆಳೆಯ ಪಳೆಯುಳಿಕೆಗಳನ್ನು ಭೂತಾಯಿಗೆ ಸಮರ್ಪಿಸಿ, ಜೈವಿಕ ಕೃಷಿಗೆ ಹೆಚ್ಚಿನ ಒಲವು ತೋರಿಸಿ ಎಂದು ಹೇಳಿದರು.

ಇಂದಿನ ಕೃಷಿ ಪದ್ಧತಿಯಿಂದ ಮನುಷ್ಯನ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳ ಕುರಿತು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಮಿಲಿಯನೇರ್ ಫಾರ್ಮರ್ ಆಫ್ ಇಂಡಿಯಾ ಪ್ರಶಸ್ತಿ ಪುರಸ್ಕೃತ ಪ್ರಗತಿಪರ ಕೃಷಿಕ ಹೆದ್ನೆ ಮುರುಗೇಂದ್ರಪ್ಪ ಅವರನ್ನು ಸನ್ಮಾನಿಸಲಾಯಿತು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿದ್ದೇಶ್ ವಾರ್ಷಿಕ ವರದಿ ಮಂಡಿಸಿದರು.



## ದಸರಾ : ಹಳೇಬಾತಿಯ ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ

ದಸರಾ ಪ್ರಯುಕ್ತ ಹಳೇಬಾತಿಯ ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿದ್ದು, 9 ದಿನಗಳ ಕಾಲ ಪುರಾಣ ಮತ್ತು ವಿಶೇಷ ಪೂಜೆ ನೆರವೇರಲಿದೆ.

## ಕೊಮಾರನಹಳ್ಳಿ, ಕೊಂಡಜ್ಜಿ, ಕೆ. ಬೇವಿನಹಳ್ಳಿ ಅಂಗನವಾಡಿಗಳಿಗೆ ಬಹುಮಾನ



**ಸ್ವಚ್ಛತಾ ಸೇವೆ**

ಮಲೇಬೆನ್ನೂರು, ಅ. 4- ನಿನ್ನೆ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಮತ್ತು ಅಮ್ಮನ ಹೆಸರಿನಲ್ಲಿ ಒಂದು ಗಿಡ ನೆಡುವ ಹಾಗೂ ಪ್ಲಾಸ್ಟಿಕ್ ಮುಕ್ತ ಜಾಗೃತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿರುವ ಕೊಮಾರನಹಳ್ಳಿಯ 'ಬಿ' ಅಂಗನವಾಡಿ ಕೇಂದ್ರಕ್ಕೆ ಪ್ರಥಮ ಸ್ಥಾನ ಲಭಿಸಿದೆ.

ಕೊಂಡಜ್ಜಿಯ 'ಬಿ' ಅಂಗನವಾಡಿ ಕೇಂದ್ರಕ್ಕೆ ದ್ವಿತೀಯ ಮತ್ತು ಕೆ. ಬೇವಿನಹಳ್ಳಿಯ 'ಎ' ಅಂಗನ ವಾಡಿ ಕೇಂದ್ರಕ್ಕೆ ತೃತೀಯ ಬಹು ಮಾನ ಸಿಕ್ಕಿದ್ದು, ತಾಲ್ಲೂಕು ಕಛೇರಿ ಯಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯ ಕ್ರಮದಲ್ಲಿ ಈ ಮೂರೂ ಕೇಂದ್ರಗಳ ಕಾರ್ಯಕರ್ತರಾದ ಕೊಮಾರನ ಹಳ್ಳಿಯ ಬಿ.ಜಿ. ಮಂಜುಳಾ, ಕೊಂಡಜ್ಜಿಯ ವನಜಾಕ್ಷಮ್ಮ, ಕೆ. ಬೇವಿನಹಳ್ಳಿಯ ಲಲಿತಮ್ಮ ಹಾಗೂ ಸಹಾಯಕಿ ಯರಾದ ಅನಸೂಯಮ್ಮ, ಶಿಲ್ಪ, ಪುಟ್ಟಮ್ಮ ಅವರುಗಳನ್ನು ತಹಶೀಲ್ದಾರ್ ಗುರುಬಸವರಾಜ್ ಸನ್ಮಾನಿಸಿದರು.

## ಶ್ರೀ ಮಹರ್ಷಿ ವಾಲ್ಮೀಕಿ ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಲು ಜಿಲ್ಲಾಡಳಿತಕ್ಕೆ ಒತ್ತಾಯ

ದಾವಣಗೆರೆ, ಅ. 4 - ಕಾಂ. ಎಚ್.ಕೆ. ರಾಮಚಂದ್ರಪ್ಪ, ಟಿ. ದಾಸಕರಿಯಪ್ಪ ಹಾಗೂ ಬಡಗಿ ಕೃಷ್ಣಪ್ಪ ಅವರುಗಳನ್ನು ವಾಲ್ಮೀಕಿ ಜಯಂತಿಯಂದು ಕೊಡ ಮಾಡುವ ಶ್ರೀ ಮಹರ್ಷಿ ವಾಲ್ಮೀಕಿ ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಬೇಕೆಂದು ಶ್ರೀ ವಾಲ್ಮೀಕಿ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ ಹಾಗೂ ಮುಖಂಡ ಆಂಜನೇಯ ಗುರೂಜಿ ಅವರು ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ.



## ಹರಿಹರ ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಶಾಹಿನಾಬಾನು ದಾದಾಪೀರ್

ಹರಿಹರ, ಅ.4- ಹರಿಹರ ನಗರ ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಶಾಹಿನಾಬಾನು ದಾದಾಪೀರ್ ಭಾನುವಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ.

ಸಚಿವ ಎಸ್.ಎಸ್ ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾಬಾಯಿ ಮಾಲತೇಶ್ ಅವರ ಆದೇಶದ ಅನ್ವಯ ಈ ಆಯ್ಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬಿದಾಲಿ, ಮುಖಂಡ ದಾದಾಪೀರ್ ಭಾನುವಳ್ಳಿ ಹಾಜರಿದ್ದರು.

## ಕದಳಿ ಮಹಿಳಾ ವೇದಿಕೆಯ 156ನೇ ಕದಳಿ ಕಮ್ಮಟ, ದತ್ತಿ ಉಪನ್ಯಾಸ ಕಾರ್ಯಕ್ರಮ




ದಾವಣಗೆರೆ, ಅ. 4- ಕದಳಿ ಮಹಿಳಾ ವೇದಿಕೆಯ 156ನೇ ಕದಳಿ ಕಮ್ಮಟ ದತ್ತಿ ಉಪನ್ಯಾಸ ಕಾರ್ಯಕ್ರಮ ನಗರದ ಶ್ರೀ ಮಂಜುನಾಥ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಚರಿಸಲಾಯಿತು.

ದಿ. ಬಿ.ಕೆ. ಸಿದ್ದಪ್ಪ ಅವರ ದತ್ತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಘಟಕದ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಾಂಶುಪಾಲ ಮಂಜುನಾಥ, ಅಂಜಿನಪ್ಪ, ಕಾರ್ಯಕ್ರಮದ ದತ್ತಿ ಉಪನ್ಯಾಸಕರಾಗಿ ಸರ್ ಸಿ.ವಿ. ರಾಮನ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶಾಂತಲಾ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕದಳಿ ಮಹಿಳಾ ವೇದಿಕೆ ರಾಜ್ಯ ಉಪ ಸಂಚಾಲಕಿ ಪ್ರಮೀಳಾ ನಟರಾಜ್, ವಿನೋದ ಅಜಗಣ್ಣನವರ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು, ದಾವಣಗೆರೆ ತಾಲ್ಲೂಕು ಘಟಕದ ಅಧ್ಯಕ್ಷೆ ಮಮತಾ ನಾಗರಾಜ್ ಉಪಸ್ಥಿತರಿದ್ದರು.

ಸೌಮ್ಯ ಸತೀಶ್ ಸ್ವಾಗತಿಸಿದರು. ಉಪನ್ಯಾಸಕರ ಪರಿಚಯವನ್ನು ನಿರ್ಮಲ ಶಿವಕುಮಾರ್ ಹಾಗೂ ದತ್ತಿ ದಾನಿಗಳ ಪರಿಚಯವನ್ನು ಲಕ್ಷ್ಮಿ ಮಲ್ಲಿಕಾರ್ಜುನ್ ನಡೆಸಿಕೊಟ್ಟರು. ಗಾಯತ್ರಿ ವಸ್ತ್ರದ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ರತ್ನ ಸಿ. ರೆಡ್ಡಿ ವಂದಿಸಿದರು.

ವಾಣಿರಾಜ್ ಕಾರ್ಯಕ್ರಮ ನಿರೂಪಿಸಿದರು. ವಿಜಯ ಚಂದ್ರಶೇಖರ್, ಪೂರ್ಣಿಮಾ ಪ್ರಸನ್ನ, ಕಾಲೇಜಿನ ಸಿಬ್ಬಂದಿ ವರ್ಗದವರು, ಶಿಕ್ಷಕರು, ಮಕ್ಕಳು, ಕದಳಿ ಮಹಿಳಾ ವೇದಿಕೆಯ ಸಲಹಾ ಸಮಿತಿ ಸದಸ್ಯರು, ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು ಎಂದು ಕಾರ್ಯದರ್ಶಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.

## ಸಿಂಗ್ರಿಹಳ್ಳಿಯಲ್ಲಿ ಗಾಂಧಿ ಜಯಂತಿ ಆಚರಣೆ



ಹರಪನಹಳ್ಳಿ, ಅ. 4- ತಾಲ್ಲೂಕಿನ ಸಿಂಗ್ರಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜನ್ಮ ದಿನಾಚರಣೆ ಆಚರಿಸಲಾಯಿತು. ಗಾಂಧೀಜಿಯವರ ಜೀವನ ಮತ್ತು ಮೌಲ್ಯಗಳನ್ನು ಮಕ್ಕಳಿಗೆ ಅರ್ಥಗರ್ಭಿತವಾಗಿ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಸಿ. ಹಾಲೇಶ್, ಉಪಾಧ್ಯಕ್ಷರು ಮತ್ತು ಸದಸ್ಯರು, ಮುಖ್ಯೋಪಾಧ್ಯಾಯರು, ಶಿಕ್ಷಕ-ಶಿಕ್ಷಕಿಯರು, ಅತಿಥಿ ಶಿಕ್ಷಕರು ಮತ್ತಿತರರು ಉಪಸ್ಥಿತರಿದ್ದರು.

## ಸಾಹಿತ್ಯದ ಗಡಿಯಾರ ಸರಿಪಡಿಸುವುದು ಕಷ್ಟದ ಕೆಲಸ : ಸಂಜೀವ ಶಿರಹಟ್ಟಿ

ರಾಣೇಬೆನ್ನೂರು, ಅ.4- ಸಾಹಿತ್ಯದ ಗಡಿಯಾರ ಸರಿಪಡಿಸುವುದು ಕಷ್ಟದ ಕೆಲಸ. ಗಡಿಯಾರದಲ್ಲಿ ಎರಡೇ ಮುಳ್ಳು ಒಂದಕ್ಕೊಂದು ಅನುಸರಿಸಿ ನಡೆಯುತ್ತವೆ. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಮುಳ್ಳುಗಳು ಅನೇಕ, ಹೊಂದಿಸಿಕೊಂಡು ಹೋಗುವುದು ಕಷ್ಟದ ಕೆಲಸ ಎಂದು ಸಂಜೀವ ಶಿರಹಟ್ಟಿ ಹೇಳಿದರು.

ನಗರದ ಕರ್ನಾಟಕ ಸಂಘದಲ್ಲಿ ಶುಕ್ರವಾರ 88 ನೇಯ ವರ್ಷದ ನಾಡಹಬ್ಬದ ಎರಡನೇಯ ದಿನದ ಸಭಾ ಕಾರ್ಯಕ್ರಮದಲ್ಲಿ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೃತ್ತಿ ಮತ್ತು ಪ್ರವೃತ್ತಿಗಳನ್ನು ಹೊಂದಿಸಿಕೊಂಡು ಹೋಗುವುದು ಕಷ್ಟದ ಕೆಲಸ. ಆದರೂ, ಪ್ರವೃತ್ತಿಗೆ ಒಂದಿಷ್ಟು ಸಮಯ ಮೀಸಲಿಟ್ಟರೆ ಜೀವನ ಸುಂದರವಾಗಿರುತ್ತದೆ ಎಂದರು.

ರಾಣೇಬೆನ್ನೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರಭಾಕರ ಶಿಗ್ಲಿ ಮಾತನಾಡಿ, ಕ.ಸಾ.ಪ. ಮತ್ತು ಕರ್ನಾಟಕ ಸಂಘದ ಸಮನ್ವಯದೊಂದಿಗೆ ಉಭಯ ಕಾರ್ಯಕ್ರಮಗಳ ಮೂಲಕ ಕನ್ನಡ ಸೇವೆ ಮಾಡುತ್ತಾ ಬಂದಿದ್ದು, ನನ್ನ ಅಧ್ಯಕ್ಷತೆಯಲ್ಲಿಯೂ ಈ ಪರಿಪಾಠ ಮುಂದುವರೆಸಿಕೊಂಡು ಹೋಗುವುದಾಗಿ ಅವರು ಹೇಳಿದರು.

ಸಭಾ ಕಾರ್ಯಕ್ರಮದ ನಂತರ ಬೆಳಗಾವಿಯ ಉದಯೋನ್ಮುಖ ಹಿಂದೂ ಸ್ತಾನಿ ಗಾಯಕಿ ಸ್ನೇಹಾ ಕುಲಕರ್ಣಿ ನಡೆಸಿಕೊಟ್ಟ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ವೀಕ್ಷಕರನ್ನು ಹಿಡಿದಿಟ್ಟು ಕೊಳ್ಳುವಲ್ಲಿ ಯಶಸ್ವಿಯಾಯಿತು.

ಶ್ರೀನಿಧಿ ಶಿರಹಟ್ಟಿ ನಾಡಗೀತೆ ಹಾಡಿದರು, ವಿಭಾ ಜೋಶಿ ಸ್ವಾಗತಿಸಿದರು, ಅಭಿನಂದನ ಜೋಶಿ ವಂದಿಸಿದರು, ಶ್ರೀಲಕ್ಷ್ಮಿ ಅಡಿಕಿ ಕಾರ್ಯಕ್ರಮ ನಿರೂಪಿಸಿದರು.





ಶಾಮನೂರಿನ ಶ್ರೀ ಮಂಗಳಗೌರಿ ದೇವಸ್ಥಾನದಲ್ಲಿ ಶ್ರೀ ದೇವಿಗೆ 2ನೇ ದಿನದ ಬ್ರಹ್ಮಚಾರಿಣಿ ಅಲಂಕಾರ.

## ಛತ್ತೀಸ್‌ಘಡದ ಬಸ್ತಾರ್‌ನ ಕಾರ್ಯಾಚರಣೆಯಲ್ಲಿ 28 ನಕ್ಸಲರು ಹತ

ದಂತೇವಾಡ, ಅ.4 - ಛತ್ತೀಸ್‌ಘಡದ ಬಸ್ತಾರ್ ಪ್ರದೇಶದಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾ ಚರಣೆಯಲ್ಲಿ 28 ನಕ್ಸಲರು ಹತರಾಗಿದ್ದಾರೆ. ಇದು ಭದ್ರತಾ ಪಡೆಗಳು ನಡೆಸಿದ ಅತಿ ದೊಡ್ಡ ಕಾರ್ಯಾಚರಣೆಗಳಲ್ಲಿ ಒಂದಾಗಿದೆ.

ಮಧ್ಯಾಹ್ನ 1 ಗಂಟೆಗೆ ನಾರಾಯಣಪುರ - ದಂತೇವಾಡ ಜಿಲ್ಲೆಗಳ ಗಡಿಯಲ್ಲಿ ಭದ್ರತಾ ಪಡೆಗಳ ಜಂಟಿ ತಂಡದಿಂದ ಕಾರ್ಯಾಚರಣೆ ನಡೆಸಲಾಗಿತ್ತು.

ಕಾರ್ಯಾಚರಣೆ ಯಲ್ಲಿ 28 ನಕ್ಸಲರು ಹತರಾಗಿದ್ದಾರೆ. ನಕ್ಸಲರಿಂದ ಭಾರಿ ಪ್ರಮಾಣದ ಶಸ್ತ್ರಗಳನ್ನು ವಶಪಡಿಸಿಕೊಳ್ಳ ಲಾಗಿದೆ. 2024ರಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಇದುವರೆಗೂ 185 ನಕ್ಸಲರು ಹತರಾಗಿದ್ದಾರೆ.

## ನಗರದಲ್ಲಿ ಇಂದು - ನಾಳೆ ಧರ್ಮ ಜಾಗೃತಿ ಸಮಾರಂಭ

ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ 38ನೇ ವರ್ಷದ ಪುಣ್ಯಾರಾಧನೆ ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ 13ನೇ ವಾರ್ಷಿಕ ಪುಣ್ಯ ಸ್ಮರಣೋತ್ಸವದ ಪ್ರಯುಕ್ತ ಶ್ರೀ ಸದ್ಯೋಜಾತ ಸ್ವಾಮೀಜಿ ಮಠದಲ್ಲಿ ಸಂಜೆ 6 ಗಂಟೆಗೆ ಧರ್ಮಜಾಗೃತಿ ಸಮಾರಂಭ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ ಶ್ರೀಶೈಲ ಮಹಾಪೀಠದ ಪ್ರಸ್ತುತ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜೆ ಜರುಗುವುದು ಎಂದು ಎಂ. ಬನ್ನಯ್ಯ ಸ್ವಾಮಿ ತಿಳಿಸಿದ್ದಾರೆ. ಪ್ರಯುಕ್ತ ಲಿಂಗೈಕ್ಯ ಉಭಯ ಜಗದ್ಗುರುಗಳವರ ಕ್ರಿಯಾ ಗದ್ದುಗೆಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ವಿಶೇಷ ಪೂಜೆ ನೆರವೇರು ವುದು. ನಾಳೆ ಭಾನುವಾರ ಪ್ರಾತಃಕಾಲ ಜಂಗಮ ವಟುಗಳಿಗೆ ಅಯ್ಯಾಚಾರ, ಶಿವದೀಕ್ಷಾ ಕಾರ್ಯಕ್ರಮ ನಡೆಯುವುದು.

## ಪುನೀತ್ ರಾಜ್‌ಕುಮಾರ್ ಕಪ್ ಚೆಸ್‌ಗೆ ಸಚಿವರು ಹಾಗೂ ಸಂಸದರಿಂದ ಚಾಲನೆ



ದಾವಣಗೆರೆ, ಅ.4- ಚೆಸ್ ಕ್ಲಬ್ ಆಯೋಜಿಸಿರುವ 'ಪುನೀತ್ ರಾಜ್ ಕುಮಾರ್ ಕಪ್' ಪಂದ್ಯಾವಳಿಯನ್ನು ಎಂ.ಸಿ.ಸಿ. 'ಬಿ' ಬ್ಲಾಕ್‌ನ ಸಚಿವರ ನಿವಾಸದ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ಹಾಗೂ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಉದ್ಘಾಟನೆ ಮಾಡಿದರು.

ಈ ಸಂದರ್ಭದಲ್ಲಿ ಮೇಯರ್ ಚಮನ್‌ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಲತಿಕ ದಿನೇಶ್ ಶೆಟ್ಟಿ, ಯುವರಾಜ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಎ. ಬಿ. ರಹೀಮ್ ಸಾಬ್, ಸವಿತಾ ಹುಲ್ಮನೆ ಗಣೇಶ್, ಅನಿತಾ ಬಾಯಿ ಮಾಲತೇಶ, ಕಾಂಗ್ರೆಸ್ ಮುಖಂಡರಾದ ಗಣೇಶ್ ಹುಲ್ಮನೆ, ಕಾರ್ಯಕರ್ತರು, ಕ್ರಿಡಾಪಟುಗಳು ಮತ್ತಿತರರು ಉಪಸ್ಥಿತರಿದ್ದರು.

## ದಸರಾ ಕವಿಗೋಷ್ಠಿಗೆ ವೀಣಾ ಕೃಷ್ಣಮೂರ್ತಿ



ದಾವಣಗೆರೆ, ಅ. 4- ಜಿಲ್ಲಾ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ವೇದಿಕೆ, (ಶಿವಮೊಗ್ಗ), ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠ (ಶಿವಮೊಗ್ಗ) ಇವರ ವತಿಯಿಂದ ನಡೆಯುವ ದಸರಾ ಕವಿಗೋಷ್ಠಿ -2024ರಲ್ಲಿ ನಗರದ ಹಿರಿಯ ಸಾಹಿತಿ ಶ್ರೀಮತಿ ವೀಣಾ ಕೃಷ್ಣಮೂರ್ತಿ ಭಾಗವಹಿಸಲಿದ್ದಾರೆ. ಶಿವಮೊಗ್ಗದ ಶರಾವತಿ ನಗರ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 6ರ ಭಾನುವಾರ ಸಂಜೆ 4.30ಕ್ಕೆ ನಡೆಯುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಪ್ರಸನ್ನಾನಂದ ಸ್ವಾಮೀಜಿ ವಹಿಸಲಿದ್ದು, ಶ್ರೀ ಸಾಯಿನಾಥ ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ವೀಣಾ ಕೃಷ್ಣಮೂರ್ತಿ ನೆರವೇರಿಸಲಿದ್ದಾರೆ.

ಗಣೇಶ್ ಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಶಿವಮೊಗ್ಗ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಜಿಲ್ಲಾ ಸಮಿತಿಯ ಡಿ. ಮಂಜುನಾಥ್ ಆಶಯ ನುಡಿಗಳನ್ನಾಡಲಿದ್ದಾರೆ.

## 206 ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸರ್ಕಾರದ ಅನುಮತಿ ವಿಳಂಬ


ಬೆಂಗಳೂರು, ಅ. 4 - ರಾಜ್ಯದ 27 ಇಲಾಖೆಗಳ 206 ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಲೋಕಾಯುಕ್ತರು ಶಿಫಾರಸ್ಸು ಮಾಡಿದ್ದು, ಇದಕ್ಕೆ ರಾಜ್ಯ ಸರ್ಕಾರ ಹಲವು ತಿಂಗಳುಗಳಿಂದ ಅನುಮತಿ ನೀಡಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸೆಪ್ಟೆಂಬರ್ 27 ರವರೆಗೆ 206 ಅಧಿಕಾರಿಗಳ ವಿರುದ್ಧದ ಕ್ರಮ ಬಾಕಿ ಇದೆ. ಸರ್ಕಾರ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ತಾನೇ ಅನುಮತಿ ನೀಡದೇ ಇರುವುದು ವಿಪರ್ಯಾಸ ಎಂದು ಲೋಕಾಯುಕ್ತ ಅಧಿಕಾರಿ ತಿಳಿಸಿದ್ದಾರೆ.

## ಅಹಮದ್‌ನಗರ ಜಿಲ್ಲೆ ಇನ್ನು ಅಹಲ್ಯಾ ನಗರ

ಮುಂಬೈ, ಅ. 4 - ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ಹೆಸರನ್ನು ಅಹಲ್ಯಾನಗರ ಎಂದು ಬದಲಿಸಲು ಕೇಂದ್ರ ಗೃಹ ಸಚಿವಾಲಯ ಒಪ್ಪಿಗೆ ನೀಡಿದೆ ಎಂದು ಮಹಾರಾಷ್ಟ್ರ ಸಚಿವ ರಾಧಾಕೃಷ್ಣ ಪಾಟೀಲ್ ತಿಳಿಸಿದ್ದಾರೆ. ಕಳೆದ ಮಾರ್ಚ್ ತಿಂಗಳಲ್ಲಿ ರಾಜ್ಯ ಸಂಪುಟ ಜಿಲ್ಲೆಯ ಹೆಸರು ಬದಲಾಯಿಸುವ ನಿರ್ಧಾರ ತೆಗೆದುಕೊಂಡಿತ್ತು. ನಂತರ ಈ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ಕೇಳಲಾಗಿತ್ತು ಎಂದು ಸಚಿವ ಪಾಟೀಲ್ ಹೇಳಿದ್ದಾರೆ. ಈ ಹಿಂದೆ ಏಕನಾಥ ಶಿಂಧೆ ನೇತೃತ್ವದ ಮಹಾರಾಷ್ಟ್ರ ಸರ್ಕಾರ ಔರಂಗಬಾದ್ ಹೆಸರನ್ನು ಛತ್ರಪತಿ ಸಾಂಭಾಜಿನಗರ ಹಾಗೂ ಒಸ್ಮಾನಾಬಾದ್ ಹೆಸರನ್ನು ಧರಾಶಿವ್ ಎಂದು ಬದಲಿಸಿತ್ತು.

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಎಸ್.ಜಿ. ಗೌಡ್ರು ಪ್ರಭುದೇವ**

ದಿನಾಂಕ 04.10.2024ರಂದು ನಿಧನರಾದ ಶಾಮನೂರಿನ
**ಶ್ರೀ ಎಸ್.ಜಿ.ಗೌಡ್ರು ಪ್ರಭುದೇವ**
ಅವರಿಗೆ **ಭಾವಪೂರ್ಣ ಶ್ರದ್ಧಾಂಜಲಿ.**
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

- ಜಿ ಜಿ. ಹೆಚ್. ರಾಮಚಂದ್ರಪ್ಪ, ದೂಡಾ ಮಾಜಿ ಅಧ್ಯಕ್ಷರು
- ಬಳ್ಳೇಕಟ್ಟೆ ಜೆ. ಮಲ್ಲಿಕಾರ್ಜುನಪ್ಪ, ದೂಡಾ ಮಾಜಿ ಅಧ್ಯಕ್ಷರು
- ಕೆ.ಎಂ. ಚಂದ್ರಶೇಖರಪ್ಪ
- ಜಿ. ಹೆಚ್. ಲಿಂಗರಾಜ್
- ಎಂ. ಶಿವಕುಮಾರ್
- ಬಿ. ಲಿಂಗರಾಜ್ (ಬೂದಿಹಾಳ್)
- ಎನ್. ಜಿ. ಪುಟ್ಟಸ್ವಾಮಿ, ರೈತ ಮುಖಂಡರು
- ಹೆಚ್.ಆರ್. ಲಿಂಗರಾಜ್, ರೈತ ಮುಖಂಡರು
- ಜೆ.ಎಂ. ನಾಗರಾಜ್ (ಹೋಟೆಲ್)
- ಎಂ.ಹೆಚ್. ಬಸವರಾಜ್, ಶ್ರೀ ಆಂಜನೇಯ ಸ್ವಾಮಿ ಪ್ರಾವಿಜನ್ ಸ್ಟೋರ್
- ಎನ್. ರೇವಣಸಿದ್ದಪ್ಪ
- ಎಸ್.ವೈ. ಕೃಷ್ಣೋಜಿರಾವ್
- ಕೆ.ಹೆಚ್. ಸಂಗಪ್ಪ
- ಎನ್. ಮಂಜುನಾಥ್
- ಎಸ್. ರಾಜಣ್ಣ
- ರುದ್ರಮುನಿ ಕಕ್ಕರಗೊಳ್ಳ
- ಅಡಿವೆಪ್ಪ (ಕಮದೋಡು)
- ಜ್ಯೋತಿ (ಮುದಳರ)

**ಲೈಬ್ರರಿ ಸ್ನೇಹ ಬಳಗ, ಶಾಮನೂರು.**

## ದುಗ್ಗಮ್ಮನ ದೇವಸ್ಥಾನದಲ್ಲಿ ದಾಸೋಹ



ದಾವಣಗೆರೆ, ಅ. 4- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ದಸರಾ ಮಹೋತ್ಸವದ ಅಂಗವಾಗಿ ಇದೇ ದಿನಾಂಕ 13 ರವರೆಗೆ ಪ್ರತಿದಿನ ಮಧ್ಯಾಹ್ನ 12.30ರ ನಂತರ ದಾಸೋಹ ನಡೆಯಲಿದೆ ಎಂದು ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ದಸರಾ ಕವಿಗೋಷ್ಠಿಗೆ ಪತ್ರಕರ್ತ ಮಲ್ಲೇಶ್

ದಾವಣಗೆರೆ, ಅ. 4- ಮೈಸೂರು ದಸರಾದಲ್ಲಿ ಈ ಬಾರಿ ಪಂಚ ಕಾವ್ಯೋತ್ಸವ ಏರ್ಪಡಿಸ ಲಾಗಿದ್ದು, 'ಸಮಾನತಾ ಕವಿಗೋಷ್ಠಿ'ಗೆ ನಗರದ ಹಿರಿಯ ಕವಿ - ಪತ್ರಕರ್ತ ಬಿ.ಎನ್. ಮಲ್ಲೇಶ್ ಅವರನ್ನು ಆಯ್ಕೆ ಮಾಡಲಾಗಿದೆ.ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 6 ರ ಭಾನುವಾರ ಬೆಳಿಗ್ಗೆ 9.30 ಕ್ಕೆ ಕವಿಗೋಷ್ಠಿ ನಡೆಯಲಿದೆ.



## ಮೀಸಲಾತಿಗಾಗಿ ಬಲೆಗೆ ಜಿಗಿದ ಮಹಾರಾಷ್ಟ್ರ ಉಪ ಸಭಾಧ್ಯಕ್ಷ

ಮುಂಬೈ, ಅ. 4 - ಬುಡಕಟ್ಟು ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ಹೋರಾಟ ನಡೆಸುತ್ತಿದ್ದ ಮಹಾರಾಷ್ಟ್ರದ ಉಪ ಸಭಾಧ್ಯಕ್ಷ ನರಹರಿ ಜಿರ್ವಾಲ್ ಹಾಗೂ ಇತರೆ ಕೆಲವರು ಮಹಾರಾಷ್ಟ್ರ ವಿಧಾನಸಭೆಯ ಮೂರನೇ ಮಹಡಿಯಿಂದ ರಕ್ಷಣಾ ಬಲೆ ಮೇಲೆ ಜಿಗಿದಿದ್ದಾರೆ.

ಆರು ಮಹಡಿಗಳ ವಿಧಾನ ಸಭೆಯಲ್ಲಿ ನಡೆದ ಈ ಘಟನೆ ಕೆಲ ಕಾಲ ಆತಂಕ ತಂದಿತ್ತು. ಆದರೆ ಎಲ್ಲರನ್ನೂ ರಕ್ಷಿಸಲಾಗಿದೆ.

ಎನ್.ಸಿ.ಪಿ. ಶಾಸಕ ಜಿರ್ವಾಲ್ ಹಾಗೂ ಬಿಜೆಪಿ ಸಂಸದ ಹೇಮಂತ್ ಸವರ ಸೇರಿದಂತೆ ಹಲವರು ಮೂರನೇ ಮಹಡಿಯಿಂದ ರಕ್ಷಣಾ ಬಲೆಯಲ್ಲಿ ಜಿಗಿದಿದ್ದರು. ಎರಡನೇ ಮಹಡಿಯಲ್ಲಿ ರಕ್ಷಣಾ ಬಲೆ ಅಳವಡಿಸಲಾಗಿತ್ತು. ಪೊಲೀಸ್ ಸಿಬ್ಬಂದಿ ಈ ನಾಯಕರನ್ನು ಬಲೆಯಿಂದ ಹೊರಗೆ ತಂದಿದ್ದಾರೆ.

## ಆನೆಕೊಂಡದ ಕುರುಡಿ ಬಣಕಾರ್ ಗೌರಮ್ಮ ನಿಧನ



ದಾವಣಗೆರೆ ಜಿ. ಕುರುಡಿ ಗ್ರಾಮದ ವಾಸಿ ಲಿಂ. ಕುರುಡಿ ಬಣಕಾರ್ ಚನ್ನಬಸಪ್ಪ ಇವರ ಧರ್ಮಪತ್ನಿ
**ಬಣಕಾರ್ ಶ್ರೀಮತಿ ಗೌರಮ್ಮ (87)**
ಇವರು ದಿನಾಂಕ 04.10.2024ನೇ ಶುಕ್ರವಾರ ಬೆಳಿಗ್ಗೆ 11.15ಕ್ಕೆ ನಿಧನರಾಗಿರುತ್ತಾರೆ. ಮೃತರು 5 ಜನ ಪುತ್ರರು, ಓರ್ವ ಪುತ್ರಿ , ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ. ಮೃತರ ಪಾರ್ಥಿವ ಶರೀರವರನ್ನು ದಿನಾಂಕ 05.10.2024ರ ಶನಿವಾರ ಬೆಳಿಗ್ಗೆ 12 ಗಂಟೆಯವರೆಗೆ ಸ್ವಗ್ರಾಮ ಆನೆಕೊಂಡದಲ್ಲಿರುವ ಮನೆಯಲ್ಲಿ ಸಾರ್ವಜನಿಕರ ದರ್ಶನಕ್ಕಿಡಲಾಗುವುದು. ನಂತರ 12.30 ಶಾಮನೂರು ರುದ್ರಭೂಮಿಯಲ್ಲಿ ಅಂತಿಮ ಸಂಸ್ಕಾರ ನಡೆಯಲಿದೆ.

ಇಂತಿ ದುಃಖತಪ್ತರು :
ಮಕ್ಕಳಾದ :
- ಶ್ರೀಮತಿ ಚನ್ನಮ್ಮ ದಿ. ಕೆ.ಎನ್. ನಾರಪ್ಪ & ಕುಟುಂಬದವರು
- ಶ್ರೀಮತಿ ಕುಸುಮ ಡಾ. ಕೆ.ಸಿ. ಶಿವಮೂರ್ತಿ & ಕುಟುಂಬದವರು
- ಶ್ರೀಮತಿ ಪುಷ್ಪ ಕೆ.ಎನ್. ಮಹೇಶ್ವರಪ್ಪ ಮತ್ತು ಕುಟುಂಬದವರು
- ಶ್ರೀಮತಿ ರತ್ನ ಕೆ.ಸಿ. ಲಿಂಗರಾಜ್ ಮತ್ತು ಕುಟುಂಬದವರು
- ಶ್ರೀಮತಿ ಜ್ಯೋತಿ ಡಾ. ಕೆ.ಸಿ. ದೇವೇಂದ್ರಪ್ಪ ಮತ್ತು ಕುಟುಂಬದವರು
- ಕುರುಡಿ, ಬಣಕಾರ್, ನಾರಪ್ಪ, ರೇವಣಸಿದ್ದಪ್ಪ & ಕುರುಡಿ ಬಣಕಾರ ನಾರಪ್ಪ ಕುಟುಂಬಸ್ಥರು, ಬಂಧುಗಳು, ಮೊಮ್ಮಕ್ಕಳು, ಅಪಾರ ಬಂಧು-ಮಿತ್ರರು
- ಶ್ರೀಮತಿ ಕೆ.ಎನ್. ಸುಮಿತ್ರಮ್ಮ ದಿ. ಗೌಡ್ರ ನಾರಪ್ಪ & ಮಕ್ಕಳು, ಪುಟಗನಾಳ್ ಗೌಡ್ರ ವಂಶಸ್ಥರು.

**ಆಕ್ಸ್‌ಫರ್ಡ್ ಪ್ರೈಮರಿ ಅಂಡ್ ಹೈಯರ್ ಪ್ರೈಮರಿ ಅಂಡ್ ಹೈಸ್ಕೂಲ್**
ಆರ್.ಎಂ.ಸಿ. ರಸ್ತೆ, ಆನೆಕೊಂಡ ಹತ್ತಿರ, ದಾವಣಗೆರೆ.




Exer Energy
Near Hotel Pooja International
P.B. Road, Davangere.
Mob. : 98445 55551, 9880169806



ಸರ್ವರಿಗೂ ನಾಡಹಬ್ಬ ದಸರಾದ ಹಾರ್ದಿಕ ಶುಭಾಶಯಗಳು...
ಹಬ್ಬದ ಸಡಗರ ಹಾಗೂ ಆಹ್ಲಾದಕರ ವಾತಾವರಣದಲ್ಲಿ ಅತ್ಯಾಕರ್ಷಕ ಹಾಗೂ ಅದ್ಭುತವಾದ ಆಫರ್ ನಿಮ್ಮದಾಗಿಸಿ....
KINETIC GREEN PLANET @ OUR HEART


ಶ್ರೀ ಮಲ್ಲಿಕಾರ್ಜುನ ಮೋಟಾರ್ & ಸ್ಕೂಟರ್ ಮಾರ್ಟ್
ಶಂಕರ್ ವಿಹಾರ್ ಬಡಾವಣೆ, ಪಿ.ಬಿ. ರೋಡ್, ದಾವಣಗೆರೆ.
63635 85424
86183 66017


## ನಿರ್ಮಲಮ್ಮ ಬನ್ನಿಕೋಡು ಗೌಡ್ರು ನಿಧನ



ದಾವಣಗೆರೆ ಕುವೆಂಪು ನಗರ, 20ನೇ ಮೇನ್ ವಾಸಿ, ದೊಡ್ಡಬಾತಿಯ ದಿ. ಬನ್ನಿಕೋಡು ಗೌಡ್ರ ದೇವೇಂದ್ರಪ್ಪನವರ ಧರ್ಮಪತ್ನಿ
**ಶ್ರೀಮತಿ ನಿರ್ಮಲಮ್ಮ ಬನ್ನಿಕೋಡು ಗೌಡ್ರು**
ಅವರು ದಿನಾಂಕ 04.10.2024ರ ಶುಕ್ರವಾರ ರಾತ್ರಿ 10.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 71 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.10.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಗ್ಲಾಸ್ ಹೌಸ್ ಪಕ್ಕದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಮಕ್ಕಳು :
ಜ್ಯೋತಿಕುಮಾರ್ ಜಿ.ಡಿ., ನಿರಂಜನ್ ಕುಮಾರ್ ಜಿ.ಡಿ. ಮೊ. 90085-26469

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 04.10.2024ರಂದು ನಿಧನರಾದ ನಮ್ಮ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಾದ
**ಶಾಮನೂರು ಶ್ರೀ ಎಸ್.ಜಿ.ಗೌಡ್ರು ಪ್ರಭುದೇವ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಮತ್ತು ಆಡಳಿತ ಮಂಡಳಿ ನಿರ್ದೇಶಕರು
**ಶ್ರೀ ರಾಮಾಂಜನೇಯ ವಿದ್ಯಾಸಂಸ್ಥೆ (ರಿ.) ಶಾಮನೂರು**
ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ
**ಶ್ರೀ ಚಿಕ್ಕನಹಳ್ಳಿ ದೊಡ್ಡಪ್ಪ ಪ್ರೌಢಶಾಲೆ**
ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ.


## ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ, ಉದ್ಘಾಟನೆ



ದಿನಾಂಕ: 05.10.2024ರ ಶನಿವಾರದಂದು
ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು ಇವರ ಅಧ್ಯಕ್ಷತೆಯಲ್ಲಿ
ಸನ್ಮಾನ್ಯ ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ
ಸನ್ಮಾನ್ಯ ಡಾ. ಪ್ರಭಾ ಮಲ್ಲಿಕಾರ್ಜುನ್, ಸಂಸದರು ಇವರಿಂದ

| ಯೋಜನೆಯ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಸಮಯ ಮತ್ತು ಸ್ಥಳ |
|---|---|---|
| 1) ದೊಡ್ಡ ಬೂದಿಹಾಳ್ ಗ್ರಾಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಲೋಕೋಪಯೋಗಿ ಇಲಾಖೆ ವತಿಯಿಂದ ಡಾ। ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಸಮಾರಂಭ | 424.93 (ಗುತ್ತಿಗೆ ಮೊತ್ತ) | ಮಧ್ಯಾಹ್ನ 3 ಗಂಟೆಗೆ ದೊಡ್ಡ ಬೂದಿಹಾಳ್ ಗ್ರಾಮ |
| 2) ಜಿಲ್ಲಾ ಪಂಚಾಯ್ತಿ ಇಂಜಿನಿಯರಿಂಗ್ ವಿಭಾಗದಿಂದ ಚಿಕ್ಕ ಬೂದಿಹಾಳ್ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡದ ಉದ್ಘಾಟನೆ | 13.90 (ಗುತ್ತಿಗೆ ಮೊತ್ತ) | ಮಧ್ಯಾಹ್ನ 3.15 ಗಂಟೆಗೆ ಚಿಕ್ಕ ಬೂದಿಹಾಳ್ ಗ್ರಾಮ |
| 3) ಆವರಗೊಳ್ಳ ಗ್ರಾಮ ಪಂಚಾಯ್ತಿ ವತಿಯಿಂದ ಚಿಕ್ಕ ಬೂದಿಹಾಳ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆ ಕೊಠಡಿ ಉದ್ಘಾಟನೆ (ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆ) | 7.45 (ಗುತ್ತಿಗೆ ಮೊತ್ತ) | ಮಧ್ಯಾಹ್ನ 3.30 ಗಂಟೆಗೆ ಚಿಕ್ಕ ಬೂದಿಹಾಳ್ ಗ್ರಾಮ |

ಈ ಕಾಮಗಾರಿಗಳ ಭೂಮಿ ಪೂಜೆ ಮತ್ತು ಉದ್ಘಾಟನೆ ಸಮಾರಂಭಕ್ಕೆ ಆಗಮಿಸುತ್ತಿರುವ ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಎಪಿಎಂಸಿ ಮಾಜಿ ಸದಸ್ಯರುಗಳಿಗೂ, ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಹಾಲಿ ಮತ್ತು ಮಾಜಿ ಸದಸ್ಯರುಗಳಿಗೂ, ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೂ ಹಾಗೂ ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ, ಸಮಾಜ ಕಲ್ಯಾಣ ಇಲಾಖೆ, ಲೋಕೋಪಯೋಗಿ ಇಲಾಖೆ, ಜಿಲ್ಲಾ ಪಂಚಾಯ್ತಿ ಇಂಜಿನಿಯರಿಂಗ್ ವಿಭಾಗ ಮತ್ತು ಗ್ರಾಮ ಪಂಚಾಯ್ತಿ ಅಧಿಕಾರಿಗಳಿಗೂ **ಹೃದಯಪೂರ್ವಕ ಸ್ವಾಗತ ಸುಸ್ವಾಗತ**

ಪ್ರಕಟಣೆ: ಜಿಲ್ಲಾ ಕಾಂಗ್ರೆಸ್, ದಾವಣಗೆರೆ


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas